# ಭಾರತದಲ್ಲಿ ಮುಸ್ಲಿಮರ ಹೊಣೆಗಾರಿಕೆಗಳು

ಹಾವನ್ನು ತುಳಿದಾಗ ಹಾವು ಕಚ್ಚುವುದಿಲ್ಲವೆಂದು ಯಾರಾದರು ಭಾವಿಸುತ್ತಾರಾ?ಕಚ್ಚುವುದಕ್ಕೆ ನಿನಗೆ ಅಧಿಕಾರವಿಲ್ಲ ಎಂದು ಹಾವಿನೊಂದಿಗೆ ಹೇಳಿದರೆ ಅದು ಕೇಳಿತಾ?. ಬಸುಂಡೆ ಏಳುವಂತೆ ಕೋಣನಿಗೆ ಭಾರಿಸಿ ಅದು ಜಾಡಿಸಲಾರದು ಅಥವಾ ಯಾವಾಗಲೂ ಅಂಕುಶದಿಂದ ತಿವಿಯುವ ಮಾವುತನನ್ನು ಆನೆ ಒಂದು ದಿನ ಸೊಂಡಿಲಿನಲ್ಲಿ ಹಿಡಿದೆತ್ತಿ ಆತನ ಕಥೆ ಮುಗಿಸಲಾರದೆಂಬುದಕ್ಕೆ ಯಾವುದೇ ಖಾತ್ರಿ ನೀಡಲಾಗದು.ಸ್ವಭಾವ ಅಸ್ತಿತ್ವ ಕೆಣಕಿದರೆ ಮಾನವರು ಮಾತ್ರವಲ್ಲ, ಪ್ರಾಣಿ ಜಂತುಗಳೂ ಪ್ರತಿರೋಧಿಸುತ್ತವೆ. ತಮ್ಮ ಮೇಲಾಗುವ ಅನ್ಯಾಯವನ್ನು ವಿರೋಧಿಸುವುದು 'ಜೀವಿ ಜನ್ಯ' ಸ್ವಭಾವವೆಂದು ಇದರಿಂದ ನಾವು ತಿಳಿಯಬಹುದು.ವಿನಾ ಕಾರಣ ಆಕ್ರಮಿಸುವುದು ಅಥವಾ ದುರುದ್ದೇಶವಿಟ್ಟುಕೊಂಡು ಮರ್ದನ ನಡೆಸುವುದು ಒಟ್ಟಿನಲ್ಲಿ ಭೂಮಿಯ ವ್ಯವಸ್ಥೆ ಕೆಡಿಸುವ ಕ್ಷೋಭೆಯನ್ನುಂಟು ಮಾಡುವುದು ಖಂಡಿತಾ ಭಯೋತ್ಪಾದನೆಯಾಗಿದೆಯಲ್ಲದೆ,ಇದರ ದೆಸೆಯಿಂದಾಗಿ ಪ್ರತಿರೋಧಕ್ಕಿಳಿಯುವುದು ಭಯೋತ್ಪಾದನೆಯಲ್ಲ.ಅಂಥವರು ಭಯೋತ್ಪಾದಕರಾಗುವುದಿಲ್ಲ. ಪ್ರಾಣ ಉಳಿಸಲು ಕೋವಿ ಎತ್ತಿಕೊಂಡವನನ್ನು ನಮ್ಮ ನ್ಯಾಯಾಲಯವು ಆಕ್ರಮಿ ಎಂದು ವಿಶ್ಲೇಷಿಸುವುದಿಲ್ಲ.ಪ್ರಾಣಾಪಾಯವಾದಾಗ ಸ್ವತಃ ತಮ್ಮನ್ನೇ ರಕ್ಷಿಸಲು ಪ್ರತಿರೋಧಿಸಬೇಕಾಗುತ್ತದೆ.ಸಂವಿದಾನ ಪ್ರಕಾರ ಪ್ರಾಣರಕ್ಷಣಾರ್ಥ ಪ್ರತಿರೋಧಿಸುವ ಹಕ್ಕು ಎಲ್ಲರಿಗೂ ಇದೆ. ಅದರೆ ವಿಶ್ವದ ಪ್ರಭುತ್ವವನ್ನು ಹೊಂದಲು ಹೊಂಚುಹಾಕುತ್ತಿರುವ ಅಮೇರಿಕ ತನ್ನ ದೌರ್ಜನ್ಯವನ್ನು ವಿರೋಧಿಸಿ ಪ್ರತಿಭಟಿಸುವವರನ್ನು ಭಯೋತ್ಪಾದಕರೆಂದು ಹೆಸರಿಸುತ್ತದೆ. ಇಸ್ಲಾಮಿನ ಆದೇಶದಂತೆ ಬದುಕುವವರ ಮೇಲೆ ಅದು ಮುಗಿಬೀಳುತ್ತದೆ. ಇಸ್ಲಾಮನ್ನು ನಾಮಾವಶೇಷ ಮಾಡಲು ಅದು ಹಾತೊರೆಯುತ್ತದೆ. ಭಾರತದಲ್ಲಿಯೂ ಇಂತಹ ಘಟನೆ ನಡೆಯುವುದು ಕಾಣಬಹುದು ಫಾಸಿಸ್ಟ್ ಶಕ್ತಿಗಳು ಉಗ್ರ ಹಿಂದುತ್ವ ವಾದಿಗಳು ಇಸ್ಲಾಮ್,ಮುಸ್ಲಿಮರ ಕುರಿತು ಅಸಹನೆ ಹೊಂದಿದ್ದಾರೆ.ಹೀಗೆ ಮುಸ್ಲಿಮರ ಮೇಲೆ ಅಕ್ರಮಣ ನಡೆಯುತ್ತದ್ದರೂ ಮುಸ್ಲಿಮರು ಪ್ರತಿಭಟಿಸಬೇಕಾ, ಪ್ರತಿಭಟಿಸದೆ ಸುಮ್ಮನಿರುವುದೇಕೆ?, ಅಥವಾ ಪ್ರತಿಭಟಿಸದೆ ಸುಮ್ಮನಿರಬೇಕಾ?. ತನ್ನ ಅನುಯಾಯಿಯಿಂದ ಪ್ರತಿರೋಧಿಸುವ ಹಕ್ಕನ್ನು ಇಸ್ಲಾಮ್ ಕಿತ್ತು ಕೊಂಡಿಲ್ಲವಲ್ಲಾ. ತಮ್ಮ ಮೇಲೆ ಆಕ್ರಮಣ ನಡೆದರೆ ಸತ್ಯವಿಶ್ವಾಸಿಗಳು ಪ್ರತಿರೋಧಿಸುತ್ತಾರೆಂದು ಅಶ್ಶೂರ ಅಧ್ಯಯ 39ನೆಯ ವಚನವೇ ವಿವರಿಸುತ್ತದೆ.ಪ್ರತಿಕಾರ ವೆಸಗುವುದಾದರೆ ಅದೇ ಪ್ರಮಾಣದಲ್ಲಿ ಪ್ರತಿಕಾರವೆಸಗಿ ಎಂದು ಅನ್ನಹ್ಲ್ ಅಧ್ಯಾಯ 126ನೆ ವಚನವೂ ಆದೇಶಿಸುತ್ತದೆ. ಮಾತ್ರವಲ್ಲ ಯಾರಾದರು ತನ್ನ ಸೊತ್ತನ್ನು ರಕ್ಷಿಸುವ ದಾರಿಯಲ್ಲಿ ಮೃತರಾದರೆ ಅವನು ಹುತಾತ್ಮನಾಗಿದ್ದಾನೆ,ಯಾರಾದರು ತನ್ನ ಗೌರವಾಭಿಮಾನವನ್ನು ರಕ್ಷಿಸುವಾಗ ಸಾಯಿಸಲ್ಪಟ್ಟರೂ ಅವನು ಹುತಾತ್ಮನಾಗಿ ದ್ದಾನೆ.ತನ್ನ ಜೀವ ಉಳಿಸುವುದಕ್ಕಾಗಿ ಮೃತನಾದರೆ ಅವನೂ ಹುತಾತ್ಮನಾಗಿದ್ದಾನೆಂದು ಪ್ರವಾದಿವರ್ಯರು(ಸ) ಹೇಳಿರುವಾಗ ಅನ್ಯಾಯಗಳನ್ನು ನೋಡಿ ಸುಮ್ಮನಿರಬೇಕೇ?ಆದರೆ ಅದೇ ಪ್ರವಾದಿವರ್ಯರ(ಸ) ಮಾರ್ಗದರ್ಶನದಂತೆ ಪ್ರತಿರೋದಕ್ಕೂ ಪ್ರತಿಕೂಲವೆಂಬ ಒಂದು ಸ್ಥಿತಿಯಿದೆ ಎಂಬ ಅಂಶವನ್ನು ಯೋಚಿಸದೆ ಹೊರಡುವ ಆವೇಶದ ಮಾತುಗಳೆಂದು ಇವನ್ನೆಲ್ಲ ಹೇಳಬಹುದು.

ನೋಡಿ ಮುಸ್ಲಿಮರೆಂದರೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಆಯಸ್ಸು ಇರುವಷ್ಟು ಸಮಯ ಕಾಲ ಹರಣ ಮಾಡುವ ಕೂಟವಲ್ಲ.ಅವರು ನಿರ್ವಹಿಸಬೇಕಾದ ಕರ್ತವ್ಯ,ಹೊಣೆಗಾರಿಕೆಗಳ ಕಡೆಗೆ ಕುರ್‌ಆನ್ ಅಡಿಗೆರೆ ಎಳೆದು ತೋರಿಸಿ ಕೊಟ್ಟಿದೆ.ಜಗತ್ತಿನ ಸಕಲ ಅಧಿಕಾರ ಐಶ್ವರ್ಯಗಳನ್ನು ಮುಂದಿಟ್ಟರೆ ನಿಜವಾದ ಮುಸ್ಲಿಮರು ಕರ್ತವ್ಯಗಳನ್ನೇ ಖಂಡಿತಾ ಆಯ್ದುಕೊಳ್ಳ ಬಯಸುವವರಾಗಿರುತ್ತಾರೆ.ಅಂದರೆ ಸಂದೇಶ ಪ್ರಚಾರದ ಹಾದಿಯಲ್ಲಿ ಜೀವ, ಪ್ರಾಣ, ಸೊತ್ತು, ಸಂತಾನ ಇತ್ಯಾದಿ ಎಲ್ಲಾ ಲೌಕಿಕ ವ್ಯಾಮೋಹಗಳು ತ್ಯಾಗಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಕಾರವೆಸಗಲು ಆದೇಶಿಸಿದ ಕುರ್‌ಆನ್, ಮರ್ದಕನನ್ನು ಮರ್ದಿತನು ಕ್ಷಮಿಸುವುದೇ ಉತ್ತಮವೆಂದು ಸಾರಿತು.ಮರ್ದಿತನು ಕ್ಷಮಿಸಿ ಸಂದಾನ ನಡೆಸಿದರೆ ಅವನ ಪ್ರತಿಫಲ ಅಲ್ಲಾಹನ ಬಳಿ ಇದೆ ಎಂದು ಕುರ್‌ಆನ್ ಉಪದೇಶಿಸುತ್ತದೆ.ಆದುದರಿಂದ ಮರ್ದಕರ ಅದೇ ಶೈಲಿಯಲ್ಲಿ ಇಸ್ಲಾಮೀ ಆಂದೋಲನಗಳು ಪ್ರತಿಕ್ರೀಯಿಸುವುದಿಲ್ಲ ಶಾಂತ ಪ್ರತಿಭಟನೆಗಳ ಮೂಲಕ ವಿರೋಧಿಸುತ್ತದೆ.

ಭಾರತದಲ್ಲಿ ಮುಸಲ್ಮಾನರು ಖಂಡಿತವಾಗಿಯೂ ಅಲ್ಪ ಸಂಖಾತರು ಬಹುಧರ್ಮೀಯ ಸಮಾಜದಲ್ಲಿ ಬದುಕುತ್ತಿರುವ ಮುಸ್ಲಿಮರಿಗೆ ದರ್ಮದ ಉಳಿವಿಗಾಗಿ ಅತಿದೊಡ್ಡ ಹೊಣೆಗಾರಿಕೆ ಇದೆ. ಇತರ ಧಮಿಯರ ಸಹಾಯ ಸಹಕಾರಗಳಿಲ್ಲದೆ ಮುಸ್ಲಿಮರಿಗೆ ತಮ್ಮ ವ್ಯಕ್ತಿತ್ವ ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಭಾರತದಲ್ಲಿ ಮುಸ್ಲಿಮರಲ್ಲದ ಶೇ.85 ಜನರಲ್ಲಿ ಬಹು ದೊಡ್ಡ ಸಂಖ್ಯೆ ಇಸ್ಲಾಮಿನ ಬಗೆಗೆ ಈಗಲೂ ಅಪರಿಚಿತವಾಗಿಯೆ ಉಳಿದಿದೆ ಅಥವಾ ಅವರು ಹಲವು ಕಾರಣಗಳಿಂದ ತಪ್ಪಭಿಪ್ರಾಯಹೊಂದಿರುವವರಾಗಿದ್ದಾರೆ.ಅದರೂ ಅವರು ಮುಸ್ಲಿಮರೊಂದಿಗೆ ಸಾಮರಸ್ಯದಿಂದ ಕೂಡಿ ಬದುಕುವ ಉತ್ತಮ ಗುಣವುಳ್ಳವರು ಇವರಲ್ಲಿಯೂ ಅಧಿಕ ಮಂದಿ ಇದ್ದಾರೆ.ಯಾವ ಕಾರಣಕ್ಕೂ ಇವರು ಮುಸ್ಲಿಮರನ್ನು ದ್ವೇಶಿಸುವುದಿಲ್ಲ.ಮುಸ್ಲಿಮರಿಗೂ ಈ ದೇಶದಲ್ಲಿ ತಮ್ಮಷ್ಟೇ ಸಮಾನ ಹಕ್ಕು ದೊರೆಯುವುದನ್ನೇ ಸ್ವತಹ ಅವರೂ ಬಯಸುತ್ತಾರೆ.

ಹೀಗಿದ್ದಾಗಲೂ ಬುಹುಸಂಖ್ಯಾತರಲ್ಲಿ ಒಂದು ಚಿಕ್ಕ ವಿಭಾಗವು ತೀವ್ರ ಕೋಮುವಾದದ ಪ್ರತಿನಿಧಿಯಾಗಿದೆ ಎಂಬುದು ಖಂಡಿತಾ ನಿಜ. ಈಗಾಗಲೇ ಅವರು ಸಂಘಟಿತವಾಗಿ ಮುಸ್ಲಿಮರ ಹಕ್ಕು,ಅವಕಾಶಗಳ ನಾಶವನ್ನು ಸುವ್ಯವಸ್ತಿತವಾಗಿ ಮಾಡಿದ್ದಾರೆ.ಒಟ್ಟಿನಲ್ಲಿ ಮುಸ್ಲಿಮರ ನಿರ್ಮೂಲನವೇ ಅವರ ಧ್ಯೇಯವೆಂಬುದು ಜಗತ್ತಿಗೆ ಗೊತ್ತಿರುವ ವಿಷಯ.ಅವರ ಈ ರೀತಿಯ ಪಾತಕ ಕೃತ್ಯಕ್ಕೆ ಮುಸಲ್ಮಾನರು ಅವರದೇ ರೀತಿಯಲ್ಲಿ ಪ್ರತಿರೋದಿಸಬೇಕೇ?,ಅವರು ಬಳಸುವಂತಹ ಅಸ್ತ್ರವನ್ನು ಮುಸ್ಲಿಮರೂ ಬಳಸಬಹುದೇ?ಅವರ ಈ ಕೃತ್ಯವನ್ನು ಪ್ರತಿರೋಧಿಸುವುದಕ್ಕೆ ಪ್ರಜಾಸತ್ತಾತ್ಮಕ ವಿಧಾನಗಳನ್ನೇ ಆಯ್ದುಕೊಳ್ಳುವುದು ಉಚಿತ ಎನಿಸಿಕೊಳ್ಳುತ್ತದೆ.ಅಲ್ಲದೆ ಅನೇಕ ಮುಸ್ಲಿಮೇತರ ಗಣ್ಯರು,ಸಂಘಟನೆಗಳು ಇವರ ವಿರೋಧಿಗಳಾಗಿದ್ದಾರೆ.ಆದುದರಿಂ ಮುಸ್ಲಿಮರು ಅವರ ವಿರುಧ ಪ್ರತಿರೋಧಿಸಿದರೆ ಗಳಿಸುವುದಕ್ಕಿಂತ ಹೆಚ್ಚು ಕಳಕೊಳ್ಳುವ ಪ್ರಸಂಗವೇ ಅಧಿಕವಾಗಿದೆ.

ಅದರಲ್ಲಿಯಾ ಅವರಲ್ಲಿ ಬಹುತೇಕರಿಗೆ ಇಸ್ಲಾಮೀ ಸಮುದಾಯದ ಬಗ್ಗೆ ಸರಿಯಾದ ಪರಿಚಯವಿಲ್ಲ ಅಥವಾ ತಪ್ಪು ಅಭಿಪ್ರಾಯಗಳಿಗೆ ಬಲಿ ಬಿದ್ದು ಅದಕ್ಕೆ ಅಂಟಿಕೊಂಡಿದ್ದಾರೆ.ಮುಸ್ಲಿಮರು ಅವರನ್ನು ತಿದ್ದಬೇಕಾದಂತಹ ಹೊಣೆಗಾರಿಯುಳ್ಳವರು.ಭಾರತದ ಮುಸ್ಲಿಮರು ಸಮರ್ಪಕವಾದ ಇಸ್ಲಾಮೀ ಶಿಕ್ಷಣವನ್ನು ಹೊಂದಿದ ಕೂಟವಲ್ಲ.ಮುಸ್ಲಿಮನಿಗೆ ಹುಟ್ಟಿದವ ಎನ್ನುವ ಒಂದು ಕಾರಣದಿಂದ ಗುರುತಿಸಿ ಕೊಳ್ಳುವವರು ಅವರಲ್ಲಿ ಇದ್ದಾರೆ.ಇಸ್ಲಾಮನ್ನು ಯಥಾರೂಪದಂತೆ ಸರಿಯಾದ ರೀತಿಯಿಂದ ಪ್ರತಿನಿಧಿಸದ್ದರಿಂದ ಮುಸ್ಲಿಮೇತರರಿಗೆ ಅದನ್ನು ಪರಿಚಯಿಸುವುದರಲ್ಲಿಯೂ ಅವರು ಸೋತಿದ್ದಾರೆ.ಅವರಲ್ಲಿ ಇಸ್ಲಾಮಿನ ಬಗ್ಗೆ ತಪ್ಪಭಿಪ್ರಾಯಕ್ಕೆ ಇದೂ ಒಂದು ಕಾರಣ.

ಇಂತಹ ಗೊಂದಲ ಪೂರಿತ ಸಮಾಜದಲ್ಲಿ ಮುಸ್ಲಿಮ್ ಅಲ್ಪ ಸಂಖ್ಯಾತರು ಯಾವ ನಿಲುವು ತಾಳಬೇಕು?.ಅಲ್ಪ ಸಂಖ್ಯೆಯಲ್ಲಿ ಬರುವ ಕೋಮು ತೀವ್ರವಾದಿಗಳನ್ನೇ ಅಥವಾ ಭಹುಸಂಖ್ಯಾತ ಸೌಹಾರ್ಧ ಪ್ರೀಯರನ್ನೇ ಎಂಬ ಪ್ರಶ್ನೆಗೆ ಇಲ್ಲಿ ಖಂಡಿತಾ ಮಹತ್ವವಿದೆ.ಒಂದು ಚಿಕ್ಕ ಸಂಖ್ಯೆಯನ್ನು ನಾಶಪಡಿಸುವುದಕ್ಕೆ ಹೊರಟು ಆಯುದ ಕೈಗೆತ್ತಿ ಪ್ರತಿರೋಧಿಸುವುದು ಅಥವಾ ಆ ಉದ್ದೇಷಕ್ಕಾಗಿ ಸಂಘಟನೆ ರೂಪಿಸುವುದು ಯಾವ ಮಾತ್ರಕ್ಕೂ ಸರಿಯಲ್ಲ.ಬದಲಾಗಿ ಶಾಂತಿ ಸಹನೆಗೆ ಒತ್ತು ನೀಡುತ್ತಾ ಸಂದೇಷ ಪ್ರಚಾರ ನಿರ್ವಹಿಸುವ ತಮ್ಮ ಮೂಲ ಭೂತ ಹೊಣೆಯನ್ನು ನಿರ್ವಹಿಸುತ್ತಾ ಶಾಂತಿ ಪ್ರೀಯರಾದ ಬಹುಸಂಖ್ಯಾತರ ಬೆಂಬಲದಿಂದ ಮತೀಯ ತೀವ್ರವಾದಿಗಳನ್ನು ಎದುರಿಸುವುದೇ ಭಾರತೀಯ ವಿವಿಧ ಧರ್ಮೀಯ ಸಮಾಜದಲ್ಲಿ ಮುಸ್ಲಿಮರ ಪಾಲಿಗೆ ಹಿತಕರವಾಗಿದೆ.

ಪ್ರತಿಯೊಬ್ಬ ಮುಸ್ಲಿಮನು ಇಸ್ಲಾಮೀ ಇತಿಹಾಸವನ್ನು ಮನಸ್ಸಲ್ಲಿರಿಸಿ ಅಧ್ಯಾಯನ ಮಾಡಿದರೆ ಇಂದು ಭಾರತದಲ್ಲಿ ಮುಸ್ಲಿಮರು ಎದುರಿಸಿದಂಥ ಅದೇ ಸ್ಥಿತಿ ಈ ಹಿಂದಿನ ಮುಸ್ಲಿಮರು ಅನುಭವಿಸಿರುವುದು ಕಾಣಬಹುದಾಗಿದೆ

ಭಾರತ ಬಹುಧರ್ಮೀಯ ರಾಷ್ಟ್ರವಾಗಿದ್ದು ಇಲ್ಲಿ ಜನರಿಗೆ ತಮ್ಮ ತಮ್ಮ ದರ್ಮವನ್ನು ಆಚರಿಸುವ, ಅನುಸರಿಸುವ ಹಾಗೂ ಪ್ರಚಾರಪಡಿಸುವ ಹಕ್ಕು ಇಲ್ಲಿನ ಸಂವಿಧಾನದಲ್ಲಿ ಇದೆ.ಇಂತಹ ಸುಂದರ ಅವಕಾಶವಿರುವಾಗ ಪ್ರತಿರೂಧಕ್ಕಿಳಿದರೆ ಮುಸ್ಲಿಮರಿಗೆ ಪ್ರಾಣಕ್ಕಿಂತಲೂ ಅಮೂಲ್ಯವಾದ ಸಂದೇಷ ಪ್ರಚಾರವನ್ನು ನಡೆಸುವ ಅವಕಾಶವನ್ನು ಕಳಕೊಳ್ಳಬೇಕಾದಿತು.ಭಾರತದ ಬಹುಸಂಖ್ಯಾತರಲ್ಲಿ ಅನೇಕ ಮಂದಿ ಕೋಮುವಾದಿಗಳ ಅಜಂಡಾದ ವಿರುಧ ಹೋರಾಡುವವರಿದ್ದಾರೆ.ಮುಸ್ಲಿಮರು ಪ್ರತಿರೋಧಕ್ಕಿಳಿದರೆ  ಇವರ ಬೆಂಬಲ ಕಳಕೊಂಡಂತಾಗುತ್ತದೆ. ಭಾರತದಲ್ಲಿ ಅಪರಾಧಿಗಳನ್ನು ಶಿಕ್ಷಿಸುವ ಕಾನೂನು ಜಾರಿಯಲ್ಲಿದೆ.ಮುಸ್ಲಿಮರು ಕೋಮುವಾದಿಗಳೊಂದಿಗೆ ಪ್ರತಿರೋಧಕ್ಕಿಳಿದು ಶತ್ರು ಸಂಹಾರಕ್ಕಿಳಿದರೆ ಇಲ್ಲಿಯ ಕಾನೂನು ಕೈಗೆತ್ತಿ ಕೊಂಡಂತಾಗುವುದು.ಇಸ್ಲಾಮಿನ ಯುಧ ಕಾನೂನು ಅಸ್ಥಿತ್ವಕ್ಕೆ ಬರಬೆಕಾದರೆ ಇಸ್ಲಾಮೀ ರಾಷ್ಟ್ರ ಸ್ಥಾಪನೆಯಾಗ ಬೇಕು.ಅದರಲ್ಲಿಯೂ ಮುಖ್ಯವಾಗಿ ತಿಳಿದಿರ ಬೇಕಾದ ವಿಷಯವೆನೆಂದರೆ ಯಾವ ರೀತಿ ಕೊಲೆ,ಹತ್ಯೆಗಳಿಗೆ ಶಿಕ್ಷೆಗಳಿವೆಯೋ ಹಾಗೆಯೇ ವ್ಯಭಿಚಾರ,ಮಧ್ಯಪಾನ, ಕೊಳ್ಳೆಹೊಡೆಯುವುದು,ದೇಷದ್ರೋಹ,ಧರ್ಮನಿಂದನೆ ಮುಂತಾದ ಕೆಡುಕುಗಳಿಗ ಶಿಕ್ಷೆ ಇದೆ.ಆದರೆ ಇದರ ಬಗ್ಗೆ ವಿಷೇಷ ಅದ್ಯತೆ ಕೊಡದೆ ಕೊಲೆಯ ವಿರುಧ ಪ್ರತಿಕಾರವೆಸಗುವುದು ಕಂಡುಬರುತ್ತದೆ.ಪ್ರತಿಕಾರಕ್ಕಿಳಿದಾಗ ಬಹುತೇಕ ಸಂಧರ್ಬದಲ್ಲಿ ನಿರಪರಾಧಿಗಳು ಮತ್ತು ಅಮಾಯಕರು ದೌರ್ಜನ್ಯಕ್ಕೊಳಗಾಗುತ್ತಾರೆ.ನೂರು ಮಂದಿ ಅಪರಾಧಿಗಳು ಪಾರಾದರೂ ಓರ್ವ ನಿರಪರಾಧಿಯನ್ನು ಶಿಕ್ಷಿಸಬಾರದೆಂದು ಇಸ್ಲಾಮ್ ಪ್ರತಿಪಾದಿಸುತ್ತದೆ.ಒಂದು ಹಿಡಿಯಷ್ಟು ಮುಸ್ಲಿಮರು ಪ್ರತಿರೋಧಕ್ಕಿಳಿದರೆ ಇದರಿಂದ ಸಮುದಾಯವು ಅಸುರಕ್ಷಿತವಗುವುದು ಖಂಡಿತ.ಘರ್ಷಣೆಗಳಲ್ಲಿ ಸಮುದಾಯ ಅಪಾಯ ಸ್ಥಿತಿಯಲ್ಲಿ ಇರುತ್ತದೆ ಮಾತ್ರವಲ್ಲ ಅಮಾಯಕರನ್ನು ನಿರಪರಾಧಿಗಳನ್ನು ವಿನಾ ಕಾರಣ ಜೈಲಿಗೆ ಅಟ್ಟಲಾಗುತ್ತದೆ.ಇಂತಹ ಸನ್ನಿವೇಷದಲ್ಲಿ ಬಾರತದಲ್ಲಿ ಮುಸ್ಲಿಮರು ಪ್ರತಿರೊಧಕ್ಕಿಳಿದರೆ ಅದೊಂದು ಅಪರಾದವಾದೀತು.ಡಾ| ಯೂಸುಫುಲ್ ಕರ್ಝಾವಿ, ಶೇಖ್ ಫೈಸಲ್ ಮೌಲವಿ ಮುಂತಾದ ವಿದ್ವಾಂಸರು ಭಾರತದಂತಹ ವಾತಾವರನದಲ್ಲಿ ಸಶಸ್ತ್ರ ಹೋರಾಟಕ್ಕಿಳಿಯುವುದು ಅನಿಸ್ಲಾಮಿಕವೆಂದು ಫತ್ವ ನೀಡಿದ್ದಾರೆ. ನಿಜವಾಗಿಯೂ ಮುಸ್ಲಿಮೇತರರಿಗೆ ಇಸ್ಲಾಮಿನ ಸಂದೇಷವನ್ನು ತಲುಪಿಸಿಮುಸ್ಲಿಮರ ನಿಜವಾದ ಸ್ವರೂಪವನ್ನು ಪರಿಚಯ ಪಡಿಸಲು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಪ್ರತಿರೋಧ ಬೇರಿಲ್ಲ.ಇಸ್ಲಾಮಿನ ಆರಂಬಿಕ ಘಟ್ಟದಲ್ಲಿ ಮಕ್ಕಾದಂತಹ ವಾತಾವರಣಕ್ಕೆ ಭಾರತೀಯ ವಾತಾವರಣವನ್ನು ಸುಮಾರಾಗಿ ಹೋಲಿಸಬಹುದಾಗಿದ್ದು ಮುಸ್ಲಿಮರು ತಾಳ್ಮೆಯಿಂದ ತಮ್ಮ ಸಂದೇಷ ಪ್ರಚಾರ ಮತ್ತು ಸತ್ಯಸಾಕ್ಷ್ಯವನ್ನು ಉನ್ನತಗೊಳಿಸುವ ಹೊಣೆಗಾರಿಕೆಯನ್ನು ನಿರ್ವಹಿಸುವುದಕ್ಕೆ ಮುಂದಾದರೆ ದ್ವೇಷಮಯ ವಾತಾವರಣ ತಿಳಿಯಾಗ ಬಹುದು.

ಭಾರತದಲ್ಲಿ ಇಂದು ಮಾತ್ರವಲ್ಲ ಎಂದೂ ಫ್ಯಾಸಿಸ್ಟ್ ಶಕ್ತಿಗಳು ಮೇಲುಗೈ ಸಾದಿಸಿದ್ದರು.ಪ್ರವಾದಿ ಮುಹಮ್ಮದ್ (ಸ) ಅವರ ಮಕ್ಕಾದ ಕಾಲಘಟ್ಟದಲ್ಲಿಯೂ  ಫ್ಯಾಸಿಸ್ಟ್ ಶಕ್ತಿಗಳು ಮೇಲುಗೈ ಸಾದಿಸಿದ್ದರು. ಅಲ್ಲಾಹನು ಏಕನು ಎಂದು ಹೇಳಿ,ಪ್ರವಾದಿ ಮುಹಮ್ಮದ್ (ಸ) ಅವರನ್ನು ಅನುಸರಿಸಿದ ಉಮಯ್ಯ ಬಿನ್ ಖಲಫ್ ಎಂಬವರ ಗುಲಾಮರಾಗಿದ್ದ ಬಿಲಾಲ್ ಅವರನ್ನು ನಿನ್ನ ಪೂರ್ವಜರ ಧರ್ಮಕ್ಕೆ ಮರಳು ಎಂದು ಆದೇಶಿಸಿದಾಗ ಅದಕ್ಕೆ ಒಪ್ಪದ ಕಾರಣ ಅವರ ಕೊರಳಿಗೆ ಹಗ್ಗ ಕಟ್ಟಿ ಮಕ್ಕಳ ಕೈಯಲ್ಲಿ ಕೊಟ್ಟು ಮಕ್ಕಾದ ಗುಡ್ಡಕಾಡು ಪ್ರದೇಷದಲ್ಲಿ ಎಳೆಸಲಾಯಿತು.ಬಿಸಿ ಮರಳಲ್ಲಿ ಮಲಗಿಸಿ ಅವರ ಮೇಲೆ ಭಾರವಾದ ಕಲ್ಲುಗಳನ್ನು ಇಡಲಾಯಿತು. ಚಾಟಿಯಿಂದ ಹೊಡೆಯಲಾಯಿತು.ಆದರೆ ಬಿಲಾಲ್ “ಅಹದ್ ಅಹದ್” ಅಲ್ಲಾಹನು ಏಕನು ಅಲ್ಲಾಹನು ಏಕನು ಎಂಬ ಶಬ್ದ ಮಾತ್ರ ಅವರ ಪ್ರತಿಭಟನೆಯ ಅಸ್ತ್ರವಾಗಿತ್ತು.ಅಬೂಬಕ್ಕರ್ ಅವರನ್ನು ಸ್ವಯಂತ್ರಗೊಳಿಸುವುದರ ಮೂಲಕ ಅಲ್ಲಾಹನು ಅವರನ್ನು ರಕ್ಷಿಸಿದನು.ಅಮ್ಮಾರ್‌ರ ತಂದೆ ತಾಯಿ ದೌರ್ಜನ್ಯಕ್ಕೊಳಗಾಗಿ ಹುತಾತ್ಮರಾದರು.ಅಂದಿನ ಕಾಲದ ಫ್ಯಾಸಿಸ್ಟರ ನಾಯಕನಾದ ಅಬೂಜಹಲ್ ಈ ಕೃತ್ಯವನ್ನು ಮಾಡಿಸಿದ್ದರು.ಪ್ರವಾದಿ (ಸ) ಅವರು ಅವರ ಕುಟುಂಬಕ್ಕೆ ಸಾಂತ್ವಾನ ಹೇಳಿದರು ಮತ್ತು ಸ್ವರ್ಗದ ಸುವಾರ್ತೆಯನ್ನು ನೀಡಿದರು. ಉಮ್ಮ ಅನ್ಸಾರ್ ಎಂಬಾಕೆಯ ಗುಲಾಮ ಖಬ್ಬಾಬ್(ರ) ಎಂಬವರ ಬೆನ್ನಿಗೆ ಬಿಸಿ ಕಬ್ಬಿಣ ಕಾಯಿಸಿ ಇಡಲಾಯಿತು.ಆಡಂಬರದ ಜೀವನದಲ್ಲಿ ಬದುಕಿದ ಮುಸಅಬ್ ಬಿನ್ ಉಮ್ಮೇರ್ (ರ) ಅವರು ಇಸ್ಲಾಮ್ ಸ್ವೀಕರಿಸಿದಾಗ ಅವರ ಸ್ವಂತ ತಾಯಿಯು ಊಟ ನೀಡದೆ ಸತಾಯಿಸಿದರು.ಅವರ ಚರ್ಮ ಹಾವಿನ ಚರ್ಮದಷ್ಟು ತೆಳುವಾಗಿತ್ತು.ಅಂದಿನ ಕಾಲದ ಶ್ರೀಮಂತ ವ್ಯಕ್ತಿ ಅಬೂಬಕ್ಕರ್(ರ) ಅವರು ಕಾಬದಲ್ಲಿ ಸಂದೇಷ ಪ್ರಚಾರ ಮಾಡಿದ ಕಾರಣಕ್ಕಾಗಿ ಪ್ರಜ್ಞೆ ಕಳಕೊಳ್ಳುವ ತನಕ ಹೊಡೆದರು.ಅಲ್ಲಾಹನ ಪ್ರವಾದಿ ಮುಹಮ್ಮದ್(ಸ)ಅವರ ಕೊರಳಿಗೆ ಕೊಳೆತ ಒಂಟೆಯ ಕರುಳನ್ನು ಹಾಕಿದರು.ಮುಖಕ್ಕೆ ಉಗುಳಿದರು.ಮೂರು ವರ್ಷಗಳ ಕಾಲ ಊರಿನಿಂದ ಬಹಿಷ್ಕಾರ ಹಾಕಲಾಯಿತು.ಎಲೆ ತೊಗಟೆ ಅವರ ಆಹಾರವಾಗಿತ್ತು.ತಾಯಿಫ್‌ನಲ್ಲಿ ದೌರ್ಜನ್ಯಕ್ಕೊಳಗಾದಾಗ ದೇವಚರರು ಪ್ರತಿಕಾರವೆಸಗಬೇಕೇ ಎಂದು ಕೇಳಿದಾಗ ಪ್ರವಾದಿಯವರು  ಅನುಮತಿ ನೀಡಲಿಲ್ಲ.

ಅಲ್ಲದೆ ಮಕ್ಕಾದ ಅತ್ಯಂತ ಶ್ರೀಮಂತ ಮತ್ತು ಜನ ಬೆಂಬಲವಿದ್ದ ಅಬ್ದುಲ್ ರಹಿಮಾನ್ ಬಿನ್ ಔಫ್,ಮಿಕ್ದಾಹ್, ಕುರಾಮ ಬಿನ್ ಮರ್ಝೂನ್,ಸದ್ ಬಿನ್ ಸಬೀ ವಕ್ಕಾಸ್‌ರಂಥ ಪ್ರಮುಖ ಸಹಾಬಿಗಳು ಪ್ರವಾದಿ(ಸ) ಅವರಲ್ಲಿ ಪ್ರತಿರೋಧದ ಅನುಮತಿ ಯಾಚಿಸಿದ್ದರು. ಆದರೆ ಅವರೊಡ್ಡಿದ ಒತ್ತಡವನ್ನು ನಿರಾಕರಿಸಿದ ಪ್ರವಾದಿ (ಸ) ಅವರಲ್ಲಿ ಹೇಳಿದ್ದು, ‘ನಮಗೆ ಅಲ್ಲಾಹನು ಆ ಅನುಮತಿ ನೀಡದಿರುವುದರಿಂದ ನೀವು ಯಾರ ಮೇಲೆಯೂ ಕೈ ಎತ್ತ ಬಾರದು’ ಎಂದಾಗಿತ್ತು.

ಹೀಗೆ ಮಕ್ಕಾದ ಸಮಾಜದಲ್ಲಿ ಪ್ರವಾದಿ(ಸ) ಪ್ರತಿರೋಧಕ್ಕೆ ಅನುಮತಿ ನೀಡದ ಕಾರಣಗಳನ್ನು ಅಧುನಿಕ ಇಸ್ಲಾಮೀ ಚಿಂತಕ ಶಹೀದ್ ಸಯ್ಯದ್ ಕುತ್‌ಬ್‌ರವರು ಕೆಲವು ಕಾರಣಗಳನ್ನು ತಿಳಿಸಿದ್ದಾರೆ.

1.ಪ್ರವಾದಿತ್ವದ ಆರಂಭಿಕ ಮಕ್ಕಾದ ಕಾಲಘಟ್ಟದಲ್ಲಿ ಇಸ್ಲಾಮೀ ಶಿಕ್ಷಣದ ಮೂಲಕ ಮುಸ್ಲಿಮರನ್ನು ತರಬೇತಿಗೊಳಿಸಿ ಅವರಲ್ಲಿ ಸಹನೆ ಕ್ಷಮಾ ಗುಣವನು ಕಲಿಸಿಕೊಡುವುದು ಪ್ರತಿರೋಧಕ್ಕಿಂತ ಮುಖ್ಯವಾಗಿತ್ತು.

2.ಶಾಂತಿ ಸಮಾಧಾನದಿಂದ ನಡೆಸುವ ಸಂದೇಷ ಪ್ರಚಾರದ ಚಟುವಟಿಕೆಯಿಂದಾಗಿ ಜನರ ಮನಸ್ಸನ್ನು ಗೆಲ್ಲಲು ಮತ್ತು ಆಕರ್ಷಿಸಲು ಸಾಧ್ಯವಾಗುತ್ತದೆ.

3. ಘರ್ಷಣೆಗಿಳಿದರೆ ಮನೆಗಳಲ್ಲಿ ಕೊಲೆ ಹತ್ಯೆಗಳು ನಡೆಯುತ್ತಿತ್ತು.

4. ಪ್ರವಾದಿಯನ್ನು,ಇಸ್ಲಾಮನ್ನು,ಅನುಯಾಯಿಗಳನ್ನು ಅಂದು ವಿರೋಧಿಸುವವರಲ್ಲೇ ಮುಂದೆ ಇಸ್ಲಾಮಿನ ಮಂಚೂಣಿಯ ಯೋಧರೋ ನಾಯಕರೋ ಆಗಿ ಪರಿವರ್ತನೆಗೊಳ್ಳುವಂತಹವರಿದ್ದರು.

5.ಮರ್ದನಕ್ಕೊಳಗಾದವರು ಹಾಗೂ ಸಮಾಜದ ಉನ್ನತ ವ್ಯಕ್ತಿಗಳು ಆಕ್ರಮಣಕ್ಕೊಳಗಾಗಿ ಇಸ್ಲಾಮಿನೆಡೆಗೆ ಬರುತ್ತಿದ್ದರು.

6. ಅಂದು ಮಕ್ಕಾದಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರಾಗಿದ್ದರು ಅವರು ಪ್ರತಿರೋಧಕ್ಕಿಳಿದರೆ ಎಲ್ಲಾ ಕಡೆಯಿಂದ ಅವರನ್ನು ಮುಗಿಸಿ ಬಿಡುತ್ತಿದ್ದರು.

7.ಎಂತಹಾ ಮರ್ಧನ,ದೌರ್ಜನ್ಯಗಳು ನಡೆದರೂ ಸಂದೇಷ ಪ್ರಚಾರ ಮೊಟಕುಗೊಳ್ಳಲಿಲ್ಲ.

8.ಪ್ರವಾದಿ(ಸ) ಅವರು ತನ್ನ ಅನುಯಾಯಿಗಳನ್ನು ಒಂದು ಉದ್ದೇಶಕ್ಕಾಗಿ ಸಿದ್ಧಪಡಿಸಿದರು.ಅನುಯಾಯಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತ್ಯಾಗ ಮಾಡಿ ನಾಯಕನ ಅನುಸರಣೆ ಮಾಡಬೇಕೆಂದು ಅವರನ್ನು ತರಬೇತಿಗೊಳಿಸಿದರು.ಮಾತು ಮಾತಿಗೂ ಕಾದಾಡುತ್ತಿದ್ದ, ನಾಯಕನ ಆದೇಶಕ್ಕೆ ಆದ್ಯತೆ ನೀಡದಿದ್ದ ಅರಬರನ್ನು ಒಂದು ಉನ್ನತ ಸಮಾಜದ ಸ್ಥಾಪನೆಗಾಗಿ ಸಿದ್ಧ ಪಡಿಸಬೇಕಾಗಿತ್ತು.

9.ಮಕ್ಕಾದ ಕುರೈಶರು ಮೊದಲೇ ಜಗಳಗಂಟಿಗಳು,ಹಾಗೂ ರಕ್ತಪಾತವೆಸಗುವವರಾಗಿದ್ದರು.ಸಂದೇಷಪ್ರಚಾರ ಕಾರ್ಯದಲ್ಲಿ ಪ್ರತಿರೋಧ ತೋರಿಸಿದರೆ ಅಲ್ಲಿ ರಕ್ತಪಾತವಾಗಿ ಇಸ್ಲಾಮ್ ಕೂಡಾ ಜಗಳಗಂಟಿ ಅಥವಾ ಘರ್ಷಣೆಯ ವರ್ಗ ಎಂಬುದು ಇತಿಹಾಸದ ಚರಿತ್ರೆಯಲ್ಲಿ ಉಳಿಯುವ ಸಾಧ್ಯತೆ ಇತ್ತು.

10.ಮಕ್ಕಾದಲ್ಲಿ ಇಸ್ಲಾಮನ್ನು ವಿರೋದಿಸಿದುದು ಒಂದು ಸಂಘಟನೆಯಲ್ಲ ಬದಲಾಗಿ ಕುಟುಂಬದ ಸದಸ್ಯರುಗಳ ಮಧ್ಯೆ, ಎಲ್ಲಾ ಮನೆಗಳಲ್ಲಿ,ತಂದೆ ಮಗನಲ್ಲಿ, ಅಣ್ಣ ತಮ್ಮನಲ್ಲಿ,ನೌಕರ ಸಾಹುಕಾರನಲ್ಲಿ ಘರ್ಷಣೆ ನಡೆಯುತ್ತಿತ್ತು.ಆದ ಕಾರಣ ಪ್ರತಿರೋಧಕ್ಕಿಳಿದರೆ ಸಂದೇಷ ಪ್ರಚಾರಕ್ಕೆ ಕಳಂಕವಾಗುತ್ತಿತ್ತು

11.ಅಲ್ಲಾಹನಿಗೆ ಯಾರಿಂದ ಇಸ್ಲಾಮಿಗಾಗಿ ಸೇವೆಯನ್ನು ಮಾಡಿಸಬೇಕೆಂಬುದು ಚೆನ್ನಾಗಿ ಗೊತ್ತಿತ್ತು.ಉಮರ್(ರ) ಅವರು ಇಸ್ಲಾಮಿನ ವಿರೋಧಿಯಾಗಿದ್ದರು.ಆದರೆ ನಂತರದ ದಿನಗಳಲ್ಲಿ ಅವರು ಇಸ್ಲಾಮಿನ ಉಥ್ಥಾನಕ್ಕಾಗಿ ದುಡಿದರು.

12. ಅರಬರಲ್ಲಿ ಒಂದು ಗುಣವಿತ್ತು ಅವರು ಮರ್ಧಿತರ ಪಕ್ಷ ವಹಿಸಿ ಅವರ ಪರ ಸೇವೆ ಸಲ್ಲಿಸುತ್ತಿದ್ದರು.ಉದಾಹರಣೆಗೆ ಅಬೂಬಕ್ಕರ್(ರ) ಅಬಿಸೀನಿಯಾಕ್ಕೆ ವಲಸೆ ಹೊರಟಾಗ ಕಾಲ್ ಗೋತ್ರದ ಇಬ್ನು ದುಗ್ನಾ ಎಂಬಾತ ಸಂರಕ್ಷಣೆಯ ಭರವಸೆ ನೀಡಿ ಮಕ್ಕಾದಲ್ಲೇ ಉಳಿಯುವಂತೆ ಮಾಡಿದ್ದರು.

13.ಮಕ್ಕಾದಲ್ಲಿ ಮುಸ್ಲಿಮರ ಸಂಖ್ಯೆ ತೀರಾ ಕಡಿಮೆ ಇತ್ತು.ಇಸ್ಲಾಮ್ ಜಗತ್ತಿನಾದ್ಯಂತ ಇನ್ನೂ ಪಸರಿಸಿಲ್ಲ.ಇಂತಹ ಪರಿಸ್ಥಿತಿಯಲ್ಲಿ ಅವರ ವಿರುದ್ಧ ಹೋರಾಡಿದರೆ ಶಿರ್ಕ್ ಬಾಕಿಯಾಗಿ ಅಲ್ಲಾಹನ ಧರ್ಮ ಮುಟ್ಟುತ್ತಿರಲಿಲ್ಲ.

14. ಇಂಥಹ ಸಂಧಿಗ್ದ ಸನ್ನಿವೇಶದಲ್ಲಿಯೂ ಕೂಡ ಸಂದೇಷ ಪ್ರಚಾರಕ್ಕೆ ಅಡ್ಡಿಯಾಗಲಿಲ್ಲ. ಹಿಂಸೆ ದೌರ್ಜನ್ಯಗಳ ನಡುವೆಯೂ ಸಂದೇಶ ಪ್ರಚಾರ ನಡೆಯುತ್ತಿತ್ತು. "ಸಂದೇಷವಾಹಕರೇ ಎಷ್ಟು ಮಾತ್ರಕ್ಕೂ ಬಹುದೇವವಾದಿಗಳನ್ನು ಅನುಸರಿಸದೆ ಕುರ್‌ಆನ್ ಎತ್ತಿಕೊಂಡು ನೀವು ತೀವ್ರ ಹೋರಾಟ ನಡೆಸಿರಿ"ಎಂದು ಮಕ್ಕಾದಲ್ಲಿ ಅಲ್ಲಾಹನ ಸೂಚನೆ ದೊರೆಯುತ್ತದೆ. ಸೂರಃ ಫುರ್ಕಾನ್‌ನಲ್ಲಿ ಈ ವಿವರವಿದೆ. ಕುರ್‌ಆನಿನ ಉಪದೇಶಗಳ ಮೂಲಕ ಆಗುವಂತಹ ಕ್ರಾಂತಿಯು ಪ್ರತಿರೋಧದ ಪರಿಣಾಮದಿಂದ ತರುವುದು ಸಾಧ್ಯವಿಲ್ಲವೆಂದು ಅಲ್ಲಾಹನು ಮುಸ್ಲಿಮರಿಗೆ ಆ ಮೂಲಕ ಮನದಟ್ಟು ಮಾಡಿದ್ದಾನೆ. ಬನೂ ಹಾಶಿಮ್ ಗೋತ್ರದ ರಕ್ಷಣೆಯಡಿಯಲ್ಲಿ ಪ್ರವಾದಿ(ಸ) ಅವರ ಸಂದೇಷ ಪ್ರಚಾರ ಮುಂದುವರಿಯುತ್ತಿತ್ತು. ಸಫಾ ಬೆಟ್ಟದ ಮೇಲೇರಿ ಸಂದೇಷ ಪ್ರಚಾರ ಮಾಡಲಾಗುತ್ತಿತ್ತು. ಹಜ್ ಸಂದರ್ಭಗಳಲ್ಲಿ ಹಾಗೂ ಸಾರ್ವಜನಿಕ ಭಾಷಣದ ಮೂಲಕ ಸಂದೇಷ ಪ್ರಚಾರ ನಡೆಯುತ್ತಿತ್ತು.ಅವರ ಬಾಯಿ ಮುಚ್ಚಿಸಲು ಅವರನ್ನು ಅಪಹರಿಸಲು ಅಥವಾ ಜೈಲಿಗಟ್ಟಲು ಧೈರ್ಯವಿದ್ದವರು ಅಲ್ಲಿ ಇರಲಿಲ್ಲ. ಭಾರತದಲ್ಲಿ ಮುಸ್ಲಿಮರ ಸಂದೇಷ ಪ್ರಚಾರ ಅದರ ಸ್ವರೂಪದಲ್ಲಿ ಅಸ್ತಿತ್ವದಲ್ಲಿರುವಾಗ ಪ್ರತಿರೋಧಕ್ಕೆ ದುಡುಕುವುದೇಕೆ? 'ಎಲ್ಲ ಮುಸ್ಲಿಮರು ಭಯೋತ್ಪಾದಕರಲ್ಲ,ಭಯೋತ್ಪಾದಕರೆಲ್ಲ ಮುಸ್ಲಿಮರು' ಎಂಬ ನಮ್ಮ ದೇಶಬಾಂದವರ ಅಪಪ್ರಚಾರವು ಇನ್ನು ಮುಂದಕ್ಕೆ ಹೋಗಿ ಮುಸ್ಲಿಮರೆಲ್ಲ ದುಷ್ಟರು,ಭಯೋತ್ಪಾದಕರು ಎನ್ನುವಲ್ಲಿಗೆ ತಲುಪೀತು. ಪರಲೋಕದ ಶಾಶ್ವತ ಜೀವನಕ್ಕಾಗಿ ಜೀವದ ಹಂಗು ತೊರೆದು ಸಂದೇಷವನ್ನು ತಲುಪಿಸುವುದೇ ಮುಸ್ಲಿಮರ ಕರ್ತವ್ಯವಾಗಿದೆ. ಮಕ್ಕಾದಲ್ಲಿ ಅಲ್ಲಾಹನನ್ನು "ರಬ್' ಎಂದ ಕಾರಣಕ್ಕಾಗಿ ಫ್ಯಾಸಿಸ್ಟುಗಳು ಭಯಾನಕ ಹಿಂಸಾ ಕೃತ್ಯಕ್ಕಿಳಿದಿದ್ದಾರೆ.ಆದರೆ ಅಲ್ಲಾಹನಂತೂ ಏಕದೇವತ್ವ, ಪ್ರವಾದಿತ್ವ, ಪರಲೋಕದ ಶಾಶ್ವತ ಜೀನಕ್ಕಾಗಿ ಮತ್ತು ರಾತ್ರಿ ನಿಂತು ನಮಾಜ್ ನಿರ್ವಹಿಸಲು,ಝಕಾತ್(ಕಡ್ಡಾಯ ದಾನ) ನೀಡಲು,ಬಡವರಿಗೆ ಸಹಾಯ ಮಾಡಲು ಸತ್ಯ ನಿಷೇಧಿಗಳನ್ನು ಕ್ಷಮಿಸಲು ಹಾಗೂ ಅವರ ಉಪಟಳ ತಾಳಿಕೊಳ್ಳುವುದಕ್ಕೆ ಆದೇಶಿಸುತ್ತಿದ್ದಾನೆಯೇ ಹೊರತು ಪ್ರತಿರೋಧಕ್ಕಂತೂ ಆಧ್ಯತೆ ನೀಡಿಲ್ಲ.ಮಕ್ಕಾದಲ್ಲಿಯೂ ಪ್ರತಿಕ್ರಿಯೆಯ ಕುರಿತು ವಚನಗಳು ಅವತೀರ್ಣಗೊಂಡಿವೆ.ಆದರೆ ಅದು ಪ್ರತಿರೋಧವನ್ನು ಉದ್ದೇಶಿಸಿ ಅಲ್ಲ.ಬದಲಾಗಿ ಉಪದೇಷವನ್ನು ಮತ್ತು ಸಾಂತ್ವನವನ್ನೇ ಉಪದೇಶಿಸಿದ್ದು.ಒಂದರ್ಥದಲ್ಲಿ ಪ್ರತಿರೊಧದ ಸೂಕ್ತವೆಂದಾಗಿರುತ್ತಿದ್ದರೆ ಪ್ರವಾದಿಯವರೇ ಕಾರ್ಯರೂಪಕ್ಕಿಳಿಸುತ್ತಿದ್ದರು. ಈ ಕುರಿತು ಎರಡು ಸೂಕ್ತಗಳು ಹೀಗಿವೆ.

"ನೀವು ಪ್ರತೀಕಾರವೆಸಗುವುದಿದ್ದರೆ ನಿಮ್ಮ ಮೇಲೆ ಅತಿರೇಕವೆಸಗಲಾಗಿದ್ದಷ್ಟು ಮಾತ್ರವೆಸಗಿರಿ.ಆದರೆ ನೀವು ತಾಳ್ಮೆವಹಿಸಿದರೆ ನಿಶ್ಚಯವಾಗಿಯೂ ಇದು ಸಹನಶೀಲರಿಗೆ ಅತ್ಯುತ್ತಮ.ಓ ಪೈಗಂಬರರೇ,ಸಹನೆಯೊಂದಿಗೆ ಕಾರ್ಯವೆಸಗುತ್ತಲೇ ಸಾಗಿರಿ ಮತ್ತು ನಿಮ್ಮ ಈ ಸಹನೆ ಅಲ್ಲಾಹನ ಅನುಗ್ರಹದಿಂದಲೇ ಇದೆ.ಅವರ ಚಟುವಟಿಕೆಗಳ ಬಗ್ಗೆ ಖೇದಿಸಬೇಡಿರಿ ಮತ್ತು ಅವರ ಕುತಂತ್ರಗಳಿಂದ ಧೈರ್ಯಗುಂದಬೇಡಿರಿ.ನಿಶ್ಚಯವಾಗಿಯೂ ಅಲ್ಲಾಹ್ ದೇವ ಭಯದೊಂದಿಗೆ ವರ್ತಿಸುವವರ ಹಾಗೂ ಸೌಜನ್ಯ ನೀತಿಯನ್ನು ಅನುಸರಿಸುವವರ ಸಂಗಡವಿದ್ದಾನೆ"(ಅನ್ನಹ್ಲ್,126-128)

"ಅವರು ತಮ್ಮ ಮೇಲೆ ಅತಿರೇಕವೆಸಗಲ್ಪಟ್ಟರೆ ಅದನ್ನು ಪ್ರತಿರೋಧಿಸುತ್ತಾರೆ. ಕೆಡುಕಿನ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ.ಇನ್ನು ಯಾರಾದರು ಕ್ಷಮಿಸಿ ಬಿಟ್ಟರೆ ಹಾಗೂ ಸುಧಾರಿಸಿ ಕೊಂಡರೆ ಅದರ ಪ್ರತಿಫಲದ ಹೊಣೆ ಅಲ್ಲಾಹನ ಮೇಲಿದೆ. ನಿಶ್ಚಯವಾಗಿಯೂ ಅವನು ಆಕ್ರಮಿಗಳನ್ನು ಮೆಚ್ಚುವುದಿಲ್ಲ. ತಮ್ಮ ಮೇಲೆ ಆಕ್ರಮಣದ ಬಳಿಕ ಪ್ರತೀಕಾರವೆಸಗಿದವರನ್ನು ಆಕ್ಷೇಪಿಸಲಾಗದು.ವಾಸ್ತವದಲ್ಲಿ ಇತರರ ಮೇಲೆ ಆಕ್ರಮಣವೆಸಗುವವರು ಮತ್ತು ಭೂಮಿಯಲ್ಲಿ ಅನ್ಯಾಯವಾಗಿ ಅತಿರೇಕವೆಸಗುವವರೇ ಆಕ್ಷೇಪಕ್ಕೆ ಅರ್ಹರು.ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ.ಆದರೆ ಯಾರಾದರು ಸಹನೆಯಿಂದ ವರ್ತಿಸಿದರೆ ಹಾಗೂ ಕ್ಷಮಿಸಿದರೆ ಇದೊಂದು ಮಹಾ ಸಾಹಸದ ಕಾರ್ಯಗಳಲ್ಲಾಗುವುದು"(ಅಶ್ಶೂರಾ,39-44)

ಈ ಎರಡು ವಚನಗಳಲ್ಲಿ ಪ್ರತೀಕಾರವೆಸಗುವ ಹಕ್ಕಿದೆ ಎಂದು ತಿಳಿಸಲಾಗಿದ್ದರೂ,ನಿರುತ್ತೇಜಿಸಲಾಗಿರುವುದನ್ನು ಜೊತೆಯಲ್ಲೇ ಕಾಣಬಹುದು ಮಾತ್ರವಲ್ಲ,ಇದು ಪ್ರತಿರೋಧಕ್ಕೆ ಅನುಮತಿ ಎಂದು ಯಾವ ಕುರ್‌ಆನ್ ವ್ಯಾಖ್ಯಾನಗಾರರು ಹೇಳಿಲ್ಲ,ಹೇಳುವ ಹಾಗೂ ಇಲ್ಲ.ಯಾಕೆಂದರೆ ಪ್ರವಾದಿವರ್ಯರ ಮಕ್ಕಾ ಜೀವನದಲ್ಲಿ ಎಂದೂ ಅಂತಹ ಪ್ರತಿರೋಧಿಸುವ ಘಟನೆ ನಡೆಯಲಿಲ್ಲ.ಅಲ್ಲದೆ ಅನ್ನಹ್ಲ್ ಸೂರಾ ಮಕ್ಕಾದಲ್ಲಿ ಅವತೀರ್ಣಗೊಂಡಿದ್ದರೂ ಮೇಲಿನ ಮೂರು ಸೂಕ್ತಗಳು ಮದೀನದಲ್ಲಿ ಅವತೀರ್ಣಗೊಂಡಿವೆ ಎಂದು ವ್ಯಾಖ್ಯಾನಗಾರರು ವಿವರಿಸಿದ್ದಾರೆ.ಇಸ್ಲಾಮೀ ಸಮಾಜ ಮದೀನದಲ್ಲಿ ಅಸ್ತಿತ್ವವನ್ನು ಪಡೆದುಕೊಂಡ ನಂತರ ಉಹುದ್ ಯುಧದಲ್ಲಿ ಶತ್ರುಗಳು ಹಮ್ಝಾರನ್ನು(ರ) ಕೊಲೆಗೈದು ಮೃತದೇಹವನ್ನು ವಿಚ್ಛಿದ್ರಗೊಳಿಸಿದಾಗ ಮುಸ್ಲಿಮರು 70 ಮುಶ್ರಿಕ್‌ಗಳ ದೇಹವನ್ನು ವಿಕೃತಗೊಳಿಸುವೆವೆಂದು ಶಪಥ ಹಾಕಿದಾಗ ಒಬ್ಬನಿಗೆ ಪ್ರತಿಯಾಗಿ 70 ಮಂದಿಯನ್ನು ಶಿಕ್ಷಿಸಲಾಗದೆಂದು ಸೂಚಿಸುತ್ತಾ ಕುರ್‌ಆನ್ ಸೂಕ್ತ ಅವತೀರ್ಣವಾಯಿತು ಎಂಬುದು ಮೇಲಿನ ಸೂರಾಗಳ ಬಗೆಗೆ ವಿದ್ವಾಂಸರ ಅಭಿಪ್ರಾಯವಾಗಿದೆ.

ಮಕ್ಕಾ ಅಧ್ಯಾಯಗಳಲ್ಲಿ ವಿಶ್ವಾಸಿಗಳು ಕ್ಷಮಿಸಬೇಕು ಮತ್ತು ಸಹಿಸಬೇಕೆಂದಿರುವುದು ವಿಶೇಷ ಮಹತ್ವವನ್ನು ಹೊಂದಿದೆ.ಸಹನೆ ಮತ್ತು ಕ್ಷಮೆ ಇಸ್ಲಾಮೀ ಸಮುದಾಯದಲ್ಲಿ ಮೂಲಭೂತ ಗುಣವಾಗಿದೆ.ಇಂದು ನಿಮ್ಮ ಮೆಲೆ ಪ್ರತೀಕಾರ ಕ್ರಮ ಕೈ ಗೊಳ್ಳಲಾಗದು 'ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ.ಅವನು ಅತ್ಯಂತ ಕರುಣಾನಿಧಿಯಗಿದ್ದಾನೆ.'(ಯೂಸುಫ್,92) ತನ್ನನ್ನು ಬಾವಿಗೆ ದೂಡಿದ ಸಹೋದರರ ಮೇಲೆ ಪ್ರತೀಕಾರವೆಸಗುವ ಅವಕಾಶವಿದ್ದೂ ಪ್ರವಾದಿ ಯೂಸುಫ್ (ಅ) ಕ್ಷಮಿಸಿದ್ದರೆಂಬ ಕುರಿತು ಇರುವ ಉಲ್ಲೇಖವಿದಾಗಿದೆ.ಅಲ್ಲಾಹನು ಅತ್ಯಂತ ಕ್ಷಮಿಸುವವನಾದ್ದರಿಂದ ಮುಸ್ಲಿಮರು ಹೆಚ್ಚು ಕ್ಷಮಿಸುವ ಗುಣವನ್ನೇ ರೂಢಿಸಿಕೊಳ್ಳಬೇಕಾಗಿದೆ.

ಅಲ್ಲಾಹನು ಭೂಮಿ ಆಕಾಶಗಳಲ್ಲಿ ಇರುವ ಎಲ್ಲವನ್ನು ಒಂದು ಯೋಜನಾಬದ್ಧವಾಗಿ ಸೃಷ್ಟಿಸಿರುತ್ತಾನೆ.ಮರಗಳ ಬೆಳವಣಿಗೆಗೆ ಒಂದು ಮಿತಿ ಕೊಟ್ಟಿರುತ್ತಾನೆ.ಜನರ ಸಾವು ಸತ್ತ ನಂತರ ಮಣ್ಣಾಗುವುದು,ಗಾಳಿ ನೀರಿನ ಮೂಲಕ ಸಸ್ಯಗಳ ಬೆಳವಣಿಗೆ, ಮಾನವ ಸಂತತಿಯ ಹರಡುವಿಕೆ,ಹೀಗೆ ಎಲ್ಲವನ್ನೂ ಯೋಜನಾಬದ್ಧವಾಗಿ ಮಾಡಿರುತ್ತಾನೆ.ಹೀಗಿರುವಾಗ ಇಸ್ಲಾಮನ್ನು ಕೂಡಾ ಲೋಕಾಂತ್ಯದ ತನಕ ಹರಡಿಸುವ ಯೋಜನೆಯನ್ನು ಮಾಡದೆ ಇರಲಿಕ್ಕಿಲ್ಲ.ಮುಸಲ್ಮಾನರ ಮೇಲಾಗುವ ಈ ದೌರ್ಜನ್ಯಗಳು ಕೂಡ ಅಲ್ಲಾಹನ ಯೋಜನೆಯ ಒಂದು ಅಂಗವಾಗಿರುತ್ತದೆ.

ಅಲ್ಲಾಹನ ಯೋಜನೆಯು ಕ್ರಮಪ್ರಕಾರ ಮುಂದುವರಿಯುವುದು.ಮಕ್ಕಾದಲ್ಲಿ ಮರ್ಧನದ ಸರಣಿಯು ಮುಂದುವರಿಯುತ್ತಿದ್ದರೂ ಇಸ್ಲಾಮಿನ ಕೆಂದ್ರವಾದ'ದಾರುಲ್ ಅರ್ಕಾಮ್'ನಲ್ಲಿ ಇಸ್ಲಾಮಿನ ಗುಪ್ತ ಸಂದೇಷ ಹರಡುತ್ತಿತ್ತು.ಅಲ್ಲಿ 3 ವರ್ಷ ಕಾರ್ಯ ಚಟುವಟಿಕೆ ನಡೆಯಿತು. ನಂತರ ಸಂದೇಷ ಪ್ರಚಾರ ಬಹಿರಂಗ ಗೊಂಡಿತು.'ದಾರುಲ್ ಅರ್ಕಾಮ್'ನಲ್ಲಿ ಇಸ್ಲಾಮ್ ಸ್ವೀಕರಿಸಿದವರಿಗೆ ಪ್ರವಾದಿಯವರು ತರಬೇತಿ ನೀಡಿದರು.ನಂತರ ಕುಟುಂಬದವರಿಗೆ ಸಂದೇಷ ತಲುಪಿಸಿದರು.ಅನಂತರ ಸಮಾಜಕ್ಕೆ ಆಮೇಲೆ ಎಲ್ಲ ಅರಬರಿಗೆ ಸಂದೇಷ ಮುಟ್ಟಿಸಿದರು.ಇಸ್ಲಾಮಿನಲ್ಲಿ ಈ ಆದ್ಯತೆಗೆ ಎಷ್ಟು ಮಹತ್ವವಿದೆ ಎಂದರೆ ಪ್ರಭಾತದ ನಮಾಝ್ ಮಗ್ರಿಬ್‌ಗೂ, ಮಗ್ರಿಬ್‌ನ ನಮಝ್ ಪ್ರಭಾತಕ್ಕೂ ಮಾಡುವಂತಿಲ್ಲ.ಹಾಗೆ ಎಲ್ಲಾದರು ಮಾಡಿದರೆ ಅದು ತಪ್ಪು ಕ್ರಮವಾಗುವುದು.ಅಂದರೆ ಮೊದಲು ಮಾಡಬೇಕಾದುದನ್ನು ಕೊನೆಗೂ, ಕೊನೆಗೆ ಮಾಡಬೆಕಾದುದನ್ನು ಮೊದಲೂ ಮಾಡುವುದಕ್ಕೆ ಅಲ್ಲಾಹನ ಅನುಮತಿ ಇಲ್ಲ.

ಭಾರತದ ಮುಸ್ಲಿಮರು ಸಂದೇಷ ಪ್ರಚಾರಕ್ಕೆ ಆಧ್ಯತೆ ಕೊಡದೆ ಪ್ರತೀಕಾರ ಪ್ರತಿರೋಧಕ್ಕೆ ಸಿದ್ಧವಾಗುವುದು ತಪ್ಪು ಕ್ರಮವಾಗುತ್ತದೆ.ಸಂದೇಷ ಪ್ರಚಾರವನ್ನು ನುಂಗಿ ಹೊಟ್ಟೆಯಲ್ಲಿಟ್ಟು ಯಾರ್‍ಯಾರನ್ನು ಕಾಫಿರ್(ಸತ್ಯ ನಿಷೇಧಿ)ಎಂದು ಕರೆಯುವುದು ಎಷ್ಟು ಸರಿ. ಮಕ್ಕಾದಲ್ಲಿ ಪ್ರವಾದಿಯವರು ಸಂದೇಶ ಪ್ರಚಾರಕ್ಕೆ ಆಧ್ಯತೆ ಕೊಟ್ಟರು. ಕುರ್‌ಅನಿನ ವಾಣಿಯನ್ನು ಕೇಳಿಸಿಕೊಳ್ಳಬಾರದೆಂದು ಮಕ್ಕಾದ ಮುಶ್ರಿಕರು ಗುಲ್ಲೆಬ್ಬಿಸುತ್ತಿದ್ದರು.ದೌರ್ಜನ್ಯಗಳು ನಡೆಯುತ್ತಿತ್ತು,ಅದರೂ ಅವರು ಎಲ್ಲವನ್ನು ಸಹಿಸುತ್ತಾ ತನ್ನ ಕರ್ತವ್ಯವನ್ನು ತ್ಯಜಿಸಲಿಲ್ಲ.

ನಿಮ್ಮ ಕೈಗಳನ್ನು ಯುದ್ಧದಿಂದ ತಡೆಯಿರಿ,ನಮಾಝನ್ನು ಸಂಸ್ಥಾಪಿಸಿರಿ ಝಕಾತನ್ನು ಪಾವತಿಸಿರಿ ಎಂದು ಆದೇಶಿಸಲಾಗಿದ್ದ ಜನತೆಯನ್ನು ತಾವು ನೋಡಿಲ್ಲವೇ? ಈಗ ಅವರೊಂದಿಗೆ ಯುದ್ಧ ಮಾಡಿರಿ ಎಂದು ವಿಧಿಸಿದಾಗ ಅವರಲ್ಲೊಂದು ವಿಭಾಗ ಅಲ್ಲಾಹನನ್ನು ಹೆದರುವ ರೀತಿ ಅಥವಾ ಅದಕ್ಕಿಂತಲೂ ಹೆಚ್ಚು ಜನರನ್ನು ಹೆದರುತ್ತಿದೆ.ಅವರು ಹೇಳುತ್ತಿದ್ದಾರೆ, "ನಮಗೇಕೆ ಯುಧಾದೇಷವನ್ನು ನೀಡಿದೆ?ನಮಗೆ ಇನ್ನೂ ಸ್ವಲ್ಪ ಕಾಲವಕಾಶವನ್ನು ನೀಡಬಾರದೇ?.ಅವರೊಂದಿಗೆ ಹೇಳಿರಿ ಲೌಕಿಕ ಸಂಪತ್ತು ಕ್ಷುಲ್ಲಕವಾದುದು.ಪರಲೋಕವು ದೇವ ಭಯವುಳ್ಳವನಿಗೆ ಹೆಚ್ಚು ಉತ್ಕೃಷ್ಟವಾದುದು.ನಿಮ್ಮೊಂದಿಗೆ ಸ್ವಲ್ಪವೂ ಅನ್ಯಾಯವೆಸಗಲಾರದು".(ಅನ್ನೀಸ 77)

ಮಕ್ಕಾದಲ್ಲಿ ಕೈ ಎತ್ತದಂತೆ ತಡೆದಿರಿಸುವುದು ಅಲ್ಲಾಹನ ಯೋಜನೆಯಾಗಿತ್ತು ಎಂಬುದನ್ನು ಮೇಲಿನ ಸೂಕ್ತವು ಸ್ಪಷ್ಟಪಡಿಸುತ್ತದೆ. ಇಸ್ಲಾಮ್ ತನ್ನ ಕಾರ್ಯ ಸೂಚಿಯನ್ನು ಪ್ರಯೋಗಕ್ಕಿಳಿಸುವಾಗ ಆದ್ಯತಾ ಕ್ರಮವನ್ನು ಅನುಸರಿಸುತ್ತದೆ.ಎಂದರೆ ಮಕ್ಕಾದ ಮುಸ್ಲಿಮರಿಗೆ ನಿರ್ಣಯಿಸಿದ್ದ ಕ್ರಮದಲ್ಲಿ ಪ್ರತಿರೋಧಿ ಆಕ್ರಮಣಕ್ಕೆ ಪ್ರಥಮ ಸ್ಥಾನವಿರಲಿಲ್ಲ.ನಮಾಝ್ ಮಾಡದಿದ್ದರೂ ಹಲ್ಲೆ ನಡೆದಿದೆ ಅದಕ್ಕೆ ಪ್ರತೀಕಾರವಾಗಿ ಮೊದಲು ಹೊಡೆಯುತ್ತೇನೆ ಅಥವಾ ನಂತರ ನಮಾಝ್, ಮೊದಲು ಪ್ರತೀಕಾರ ತೀರಿಸುತ್ತೇನೆ ಎಂದು ಬಯಸುವಂತಿಲ್ಲ.ಹೀಗೆ ಅಂದಿನ ಮಕ್ಕಾದ ಮುಸ್ಲಿಮರನ್ನು ಈ ರೀತಿ ತರಬೇತಿಗೊಳಿಸುವ ಯೋಜನೆ ಅಲ್ಲಾಹನದಾಗಿತ್ತೆಂದು ಮನದಟ್ಟಾಗುತ್ತದೆ

.ಸಹನೆ ತಾಳ್ಮೆಗಳ ತರಬೇತಿಯ ಯೋಜನೆಯ ಪರಿಣಾಮ ಮುಂದಿನ ದಿನಗಳಲ್ಲಿ ಗೋಚರಿಸಿದವು.ಪ್ರವಾದಿ(ಸ) ಮತ್ತು ಸಂಗಾತಿಗಳ ಮೇಲೆ ಮಕ್ಕಾದಲ್ಲಿ ವಿರೋಧಿಗಳು ಎಸಗಿದ ದೌಜನ್ಯ ಅತಿಯಾದಾಗ ವಲಸೆ (ಹಿಜಿರಾ) ಆದೇಶ ದೊರೆಯಿತು ಆ ವೇಳೆಗೆ ಪ್ರವಾದಿವರ್ಯರ ಹತ್ಯಾ ಯೊಜನೆಯನ್ನು ಮಕ್ಕಾ ಮುಶ್ರಿಕರು ರೂಪಿಸಿದ್ದರು.ಮನೆಮಾರು ಊರು ತೊರೆದು ಮದೀನಾಕ್ಕೆ ವಲಸೆ ಹೋದ ಪ್ರವಾದಿಯವರನ್ನು(ಸ)ಅಲ್ಲಿನ ಎರಡು ಪ್ರಬಲ ಗೋತ್ರಗಳು ಬೆಂಬಲಿಸಿತ್ತು.

ಹೀಗೆ ಪ್ರವಾದಿ(ಸ) ನಾಯಕತ್ವದಲ್ಲಿ ಒಂದು ರಾಷ್ಟ್ರ ಅಸ್ತಿತ್ವಕ್ಕೆ ಬಂದಾಗ ಅಲ್ಲಾಹನಿಂದ ಪ್ರತಿರೋಧದ ಅನುಮತಿ ದೊರಕಿತು.ಆಕ್ರಮಣಕ್ಕಲ್ಲ,ಸ್ವರಕ್ಷಣೆಗೆ ಅನುಮತಿಸಲಾಗಿದೆ ಎಂಬುದು ಗಮನಾರ್ಹವಾಗಿದೆ. ಕುರ್‌ಆನ್ ಇದನ್ನು ಹೀಗೆ ವಿವರಿಸಿದೆ. "ಯಾರ ವಿರುದ್ಧ ಯುದ್ಧ ನಡೆಸಲಾಗುತ್ತಿದೆಯೋ ಅವರಿಗೆ ಅನುಮತಿ ನೀಡಲಾಗಿದೆ.ಏಕೆಂದರೆ ಅವರು ಮರ್ದಿತರು ನಿಶ್ಚಯವಾಗಿಯೂ ಅಲ್ಲಾಹನು ಅವರಿಗೆ ಸಹಾಯ ನೀಡಲು ಸಮರ್ಥನು."(29:39) ಆದುದರಿಂದ ಸತ್ಯವಿಶ್ವಾಸಿಗಳು ಅಲ್ಲಾಹನ ಯೋಜನೆಯಂತೆ ದೊರೆಯುವ ಸಹಾಯದ ನಿರೀಕ್ಷೆಯಿರಿಸಬೇಕಾಗಿದೆ.

"ಇವರು 'ನಮ್ಮ ಪ್ರಭು ಅಲ್ಲಾಹ್'ಎಂದಿಷ್ಟೇ ಹೇಳಿದ ತಪ್ಪಿಗಾಗಿ ತಮ್ಮ ಮನೆಮಾರುಗಳಿಂದ ಅನ್ಯಾಯವಾಗಿ ಹೊರಹಾಕಲ್ಪಟ್ಟವರು"(22:40) ಮಾನವ ಕುಲದ ವಿಮೋಚನೆಗೆ ನಿಯುಕ್ತರಾದ ಅಲ್ಲಾಹನ ಪ್ರವಾದಿಯನ್ನು ಅನುಸರಿಸಿದ ಒಂದೇ ಕಾರಣಕ್ಕಾಗಿ ಮುಸ್ಲಿಮರನ್ನು ಮಕ್ಕಾದಿಂದ ವಲಸೆ ಹೋಗುವಷ್ಟು ದೌರ್ಜನ್ಯಕ್ಕೊಳಪಡಿಸಲಾಗಿತ್ತು.ಆದುದರಿಂದ ಅವರಿಗೆ ಪ್ರತಿರೋಧ ನಡೆಸಬಹುದೆಂಬ ದೇವಾದೇಶವಾಗಿದೆ.ಭಾರತದ ಮುಸ್ಲಿಮರಿಗೆ ಇಸ್ಲಾಮಿನ ಕಟು ವೈರಿಗಳು ಕೂಡ ನೀವು ಅಲ್ಲಾಹನ ಆರಾಧನೆಯನ್ನು ತೊರೆಯಬೇಕು ಎಂದು ಬಹಿರಂಗವಾಗಿ ಹೇಳಿಲ್ಲ.ಈ ನಿಟ್ಟಿನಲ್ಲಿ ಮಕ್ಕಾ ಮುಸ್ಲಿಮರು ಮುಶ್ರಿಕರಿಂದ ಎದುರಿಸಿದ ಸವಾಲಿನಷ್ಟುತೀವ್ರವಾಗಿರುವ ಸವಾಲು ಇಂದಿನ ಭಾರತೀಯ ಮುಸ್ಲಿಮ್ ಅಲ್ಪಸಂಖ್ಯಾತರ ಮುಂದಿಲ್ಲ.

ಮದೀನಾದಲ್ಲಿ ಪ್ರತಿರೋಧದ ಆದೇಶ ಬಂದಾಗಲೂ ಮಕ್ಕಾದಲ್ಲಿ ಅನೇಕ ವಿಶ್ವಾಸಿಗಳು ದೌರ್ಜನ್ಯಕ್ಕೊಳಗಾಗುತ್ತಿದ್ದರು.ಅವರು "ಓ ನಮ್ಮ ಪ್ರಭು ಆಕ್ರಮಿಗಳು ವಾಸಿಸುವ ಈ ನಾಡಿನಿಂದ ನಮ್ಮನ್ನು ಹೊರತೆಗೆ ಎಂದು ಮೊರೆ ಇಡುತ್ತಿದ್ದರು.(ಅನ್ನಿಸ–75)ಮಕ್ಕಾದಲ್ಲಿ ವಿಶ್ವಾಸಿಗಳು ಪ್ರವಾದಿಯ ಅನುಪಸ್ಥಿತಿಯಲ್ಲಿ ಅಲ್ಲಾಹನಲ್ಲೇ ಭರವಸೆಯನ್ನಿರಿಸಿ ಈ ರೀತಿ ರೋಧಿಸುತ್ತಿದ್ದರು ವಿನಹ ಪ್ರತಿರೋಧಕ್ಕಾಗಿ ಸಶಸ್ತ್ರ, ಗುಪ್ತ ಹೋರಾಟವನ್ನು ಅಥವಾ ಸಂಘಟನೆಗಳನ್ನು ನಡೆಸಿಲ್ಲ. ಶಸ್ತ್ರವೆತ್ತಬಾರದೆಂಬ ಆದೇಶವನ್ನು ಪ್ರವಾದಿಯ ಅನುಪಸ್ತಿತಿಯಲ್ಲೂ ಅವರು ಪಾಲಿಸಿದರು. ಆಗ ಅಲ್ಲಾಹನೇ ಸತ್ಯವಿಶ್ವಾಸಿಗಳನ್ನು ಉದ್ದೇಶಿಸಿ ಪ್ರಶ್ನಿಸುತ್ತಾನೆ, "ಮರ್ದನಕ್ಕೊಳಗಾದ ಪುರುಷರು ಸ್ತ್ರೀಯರು ಮತ್ತು ಮಕ್ಕಳಿಗಾಗಿ ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡದಿರಲು ಕಾರಣವೇನು?"(ಅನ್ನಿಸ:75) ಹೀಗೆ ಕುರ್‌ಅನ್ ಮರ್ದಿತ ವಿಭಾಗದ ವಿಮೋಚನೆಯ ಹೊಣೆಯನ್ನು ಮದೀನಾದ ಮುಸ್ಲಿಮರಿಗೆ ನೆನಪಿಸುತ್ತದೆಯೇ ಹೊರತು ಮಕ್ಕಾದಲ್ಲಿರುವ ಅಲ್ಪ ಸಂಖ್ಯೆಯ ಮುಸ್ಲಿಮರು ಸಂಘಟಿತವಾಗಿ ಶತ್ರುಗಳನ್ನು ಪ್ರತಿರೋಧಿಸಬೇಕೆಂಬುದನ್ನು ಸೂಚಿಸುವುದಿಲ್ಲ.ಮರ್ದಿತರೇ ಮರ್ದಿತರನ್ನು ವಿಮೋಚಿಸಬೇಕೆಂಬ ನ್ಯಾಯಕ್ಕಿಂತ ಮರ್ದಿತರನ್ನು ವಿಮೋಚಿಸಲು ಅಲ್ಲಾಹನೇ ವಿಮೋಚಿಸುವ ವ್ಯವಸ್ಥೆ ರೂಪಿಸುತ್ತಾನೆ ಎಂಬುದು ಇದರಿಂದ ಅರ್ಥವಾಗುತ್ತದೆ.ಭಾರತೀಯ ಸಮಾಜದಲ್ಲಿಯೂ ಕೂಡ ಮುಸ್ಲಿಮೇತರ ಸಂಘಟನೆಗಳಿಗೆ, ಕೋಮುವಾದ ವಿರೋಧಿ ಪ್ರಗತಿಪರರಿಗೆ ಮುಸ್ಲಿಮರಿಗೆ ಸಂಭವಿಸುವ ಹಿಂಸೆಯನ್ನು ಪ್ರತಿರೋಧಿಸಲು ಅವರಿಗೆ ಪ್ರೇರಣೆ ಸಿಕ್ಕಿದ್ದು ಅದು ಅಲ್ಲಾಹನ ನೆರವಿನ ಕುರಿತಾಗಿದೆ.

ಮಕ್ಕಾದಲ್ಲಿ ಯಾರೂ ಮುಸ್ಲಿಮರ ಮೇಲೆ ಕೈ ಹಾಕಿಲ್ಲ ಎಂಬ ಕಾರಣಕ್ಕಾಗಿ ಯುದ್ಧ ನಿಷೇಧದ ಸೂಕ್ತ ಅವತೀರ್ಣವಾಗದೆ ಇದ್ದುದಲ್ಲ. ಬದಲಾಗಿ ಇಸ್ಲಾಮಿನ ಇತಿಹಾಸದ ಪ್ರಾರಂಭಿಕ ಪಾಠ ಕಲಿತವರಿಗೂ ಮಕ್ಕಾದಲ್ಲಿ ಸತ್ಯವಿಶ್ವಾಸಿಗಳ ಬದುಕು ದೌರ್ಜನ್ಯಕ್ಕೊಳಗಾಗಿತ್ತು.ಪ್ರತಿರೋಧವನ್ನು ತಡೆದಿರುವುದು ಅಂದು ಅಲ್ಲಾಹನ ಯುಕ್ತಿಯಾಗಿತ್ತು. ಅಂದರೆ ಶಕ್ತಿ ಇಲ್ಲದೆ,ಒಂದು ವ್ಯವಸ್ಥೆ ಇಲ್ಲದೆ,ಸಂದೇಶ ಪ್ರಚಾರ ಜಾರಿಯಲ್ಲಿ ಇದ್ದ ಸಮಯದಲ್ಲಿ ಇಸ್ಲಾಮಿನ ಅಸ್ತಿತ್ವ ಭದ್ರವಾಗಿ ತಳವೂರದೆ ಪ್ರತಿರೋಧಕ್ಕೆ ಪ್ರವಾದಿಯವರು ಅನುಮತಿ ಕೊಡಲಿಲ್ಲ.ಇಸ್ಲಾಮೀ ರಾಷ್ಟ್ರ ಮದೀನಾದಲ್ಲಿ ಸ್ಥಾಪನೆಗೊಂಡು ಅಲ್ಲಿ ಬೆಂಬಲಿಗರು ಸಹಾಯಕರು ದೊರೆತಾಗ ಯುದ್ಧದ ಆದೇಶವಾಗಿತ್ತು ಎಂಬುದು ಗಮನಾರ್ಹವಾಗಿದೆ.

ಅಲ್ಲಾಹನು ಯುದ್ಧದ ಕಾನೂನನ್ನು ಅತೀ ಸೂಕ್ತವಾಗಿದ್ದ ಕಾಲದಲ್ಲಿ ನಿಯಮಬದ್ಧಗೊಳಿಸಿದನು.ಮಕ್ಕಾದ ಜನಸಂಖ್ಯೆಯ ಶೇ.10%ಕ್ಕಿಂತಲೂ ಕಡಿಮೆ ವಿಶ್ವಾಸಿಗಳ ಸಂಖ್ಯೆ ಇರುವಾಗ ಯುದ್ಧವನ್ನು ಆದೇಶಿಸುತ್ತಿದ್ದರೆ ಅದು ಸಹಜವಾಗಿ ಅವರಿಗೆ ಕಷ್ಟಕರವಾಗುತ್ತಿತ್ತು. ಪ್ರವಾದಿ (ಸ) ಅವರೊಂದಿಗೆ ಕಾಬಾದಲ್ಲಿ ಮದೀನಾದ ಕೆಲವರು ಅನುಸರಣೆ,ಪ್ರತಿಜ್ಞೆ(ಒಪ್ಪಂದ) ಮಾಡುವಾಗ ಅವರ ಸಂಖ್ಯೆ 80ಕ್ಕೂ ಅಧಿಕವಿತ್ತು.ಅವರು ಅಂದು ರಾತ್ರಿಯೇಆಕ್ರಮಣ,ಕೊಲೆಗೆ ಅನುಮತಿಯನ್ನು ಕೇಳಿದ್ದರು.ಆದರೆ ಪ್ರವಾದಿ(ಸ) ಅವರನ್ನು ತಡೆದಿದ್ದರು.ಆಗಲೂ ಸತ್ಯವಿಶ್ವಾಸಿಗಳು ನಿರಂತರ ಹಿಂಸೆ,ದೌಜನ್ಯಕ್ಕೊಳಗಾಗುತ್ತಿದ್ದರು.ಆಗಲೇ ಒಂದು ತಂಡ ಅಬಿಸೀನಿಯಾಕ್ಕೂ ಇನ್ನೊಂದು ತಂಡ ಮದೀನಾಕ್ಕೂ ವಲಸೆ ಹೋಯಿತೇ ವಿನಹ ಪ್ರತಿ ಏಟನ್ನು ಆಲೋಚಿಸಿಲ್ಲ.ಆ ಬಳಿಕ ಪ್ರವಾದಿಯವರು ಮದೀನಾದಲ್ಲಿ ಇವರನ್ನೊಳಗೂಡಿ ಅವರ(ಸ) ನಾಯಕತ್ವದಲ್ಲಿ ಸಂಘಟಿತರಾದರು.ಇಸ್ಲಾಮೀ ರಾಷ್ಟ್ರವನ್ನು ಸ್ಥಾಪಿಸಿದ ನಂತರವೇ ಶತ್ರುಗಳ ಜೊತೆಗೆ ಯುದ್ಧಾದೇಶ ದೊರೆಯಿತು.

ಮಕ್ಕಾದಲ್ಲಿ ಸಹನೆಯಿಂದ ದೌಜನ್ಯಗಳನ್ನು ತಾಳಿಕೊಳ್ಳುವ ಮುಸ್ಲಿಮರು ತಮ್ಮ ಸೊತ್ತು–ವಿತ್ತ ಸಂಭಂಧ,ಅಸ್ತಿತ್ವಗಳನ್ನೆಲ್ಲಾ ತೊರೆದು ತಮ್ಮ ಧರ್ಮವನ್ನು ರಕ್ಷಿಸಲು ಮತ್ತು ಅಲ್ಲಾಹನ ಸಾಮಿಪ್ಯ ದೊರೆಯಲು ಅಲ್ಲಾಹನಲ್ಲಿ ಯಾಚಿಸುವುದನ್ನು ನೋಡಿಯೇ ಕೆಲವರು ಸತ್ಯವಿಶ್ವಾಸ ಸ್ವೀಕರಿಸಿದ್ದರೆಂದು ಸೈಯದ್ ಕುತುಬ್ ಅಭಿಪ್ರಾಯಪಟ್ಟಿದ್ದಾರೆ.ಪ್ರವಾದಿ(ಸ) ಅವರ ಬಳಿ ಪ್ರತೀಕಾರೇಚ್ಛೆಯಿಂದ ಬಂದವರಿಗೆ ಸಹನೆಯ ಉಪದೇಷ ಮಾಡುತ್ತಿದ್ದರು. ಸಹನೆ ವಹಿಸಲು ಶ್ರಮಿಸುವವನಿಗೆ ಅಲ್ಲಾಹನ ಸಹಾಯವಿದೆ.ಸಹನೆಗಿಂತ ಉತ್ತಮವಾದ ಮತ್ತು ವಿಶಾಲವಾದ ಬೇರೆ ಯಾವುದೇ ದಾನವು ಯಾರಿಗೂ ಸಿಕ್ಕಿಲ್ಲವೆಂದು ಪ್ರವಾದಿ(ಸ) ಉಪದೇಶಿಸುತ್ತಿದ್ದರು.ಇಂತಹಾ ಅವಮಾನಗಳು ನಡೆಯುತ್ತಿರುವುದರ ನಡುವೆಯು ಸಹನೆವಹಿಸುವುದರಲ್ಲಿ ಅಲ್ಲಾಹನ ಯುಕ್ತಿ ಅಡಗಿತ್ತು.ಇದಕ್ಕೆ ವಿರೋಧವಾದ ನೀತಿ ಎಷ್ಟು ಮಾತ್ರಕ್ಕೂ ಸರಿಯಲ್ಲ "ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ರೀತಿಯಲ್ಲಿ ಹೋರಾಡಿರಿ,ಅವನು ನಿಮ್ಮ ಕಾರ್ಯಕ್ಕಾಗಿ ನಿಮ್ಮನ್ನು ಆರಿಸಿಕೊಂಡಿದ್ದಾನೆ ಮತ್ತು ಧರ್ಮದಲ್ಲಿ ನಿಮಗೇನೂ ಸಂಕೀರ್ಣತೆಯಿರಿಸಿಲ್ಲ"(ಅಲ್ ಹಜ್_78). ಕೆಲವೊಮ್ಮ ಸಹನೆಯೇ ಪ್ರತಿಯೇಟು ನೀಡುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಬಹುದು. ಅಂತಹ ಸಂದರ್ಭದಲ್ಲಿ ಸಹನೆಯನ್ನು ಜಿಹಾದ್ ಎಂದು ಭಾವಿಸ ಬೇಕಾಗುತ್ತದೆ.ಇಸ್ಲಾಮಿನ ಆರಂಭಿಕ ಹಂತದಲ್ಲಿ ಪ್ರವಾದಿ(ಸ) ಸಂಗಾತಿಗಳಿಗೆ ಸಹನೆ ಮತ್ತು ತಾಳ್ಮೆಯ ಉಪದೇಶದ ಮೂಲಕ 23 ವರ್ಷದ ಕಿರು ಅವಧಿಯಲ್ಲಿ ಅವರು ಇಸ್ಲಾಮನ್ನು ಯಶಸ್ವಿಯಾಗಿ ಸಂಸ್ಥಾಪಿಸಿದರು.ಸಂಗಾತಿಗಳಿಗೆ ಅಂದು ಪ್ರತೀಕಾರವೆಸಗಲು ಅವಕಾಶ ನೀಡಿದ್ದರೆ ಅತ್ಯುಗ್ರ ವಿರೋಧಿಗಳಾದ ಉಮರ್(ರ) ,ಖಾಲಿದ್ (ರ) ,ಅಬೂಸುಫಿಯಾನ್‌ರಂಥವರು ದೊರೆಯಲು ಸಾಧ್ಯವಿರಲಿಲ್ಲ. ಹೀಗೆ ಸಹನೆ ಕೂಡಾ ಪ್ರತಿರೋಧವೆನಿಸಿಕೊಳ್ಳುತ್ತದೆ ಎಂಬುದನ್ನು ಇಂದಿನ ಮುಸಲ್ಮಾನರಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕಾಗಿದೆ.ಪ್ರವಾದಿವರ್ಯರ(ಸ) ಮಕ್ಕಾ ಕಾಲಘಟ್ಟಕ್ಕೆ ಸಮಾನವಾಗಿರುವ ರಾಜಕೀಯ ವಾತಾವರಣದಲ್ಲಿ ಭಾರತೀಯ ಮುಸಲ್ಮಾನರು ಬದುಕುತ್ತಿರುವಾಗ ಅಲ್ಲಾಹನ ಯುಕ್ತಿಯ ಬಗ್ಗೆ ವಿದ್ವಾಂಸರು ತಳೆದ ಅಭಿಪ್ರಾಯಗಳನ್ನು ಗಾಳಿಗೆ ತೂರಿ ಪ್ರತಿರೋಧವನ್ನು ಪ್ರೋತ್ಸಾಹಿಸುವುದರಿಂದ ಅವರ ಇಹ ಪರಗಳು ನಷ್ಟವಾಗಬಹುದು.

ಅಲ್ಲದೆ ಲೋಕದಲ್ಲಿ ಮಾನವರ ಮಾರ್ಗದರ್ಶನಕ್ಕಾಗಿ ಬಂದ ಅನೇಕ ಪ್ರವಾದಿಗಳ ತತ್ವ ಆದರ್ಶಗಳು ಕೂಡ ಸಹನೆಯದ್ದಾಗಿತ್ತು.

ನೂಹ್(ಅ)ರವರ ಕಾಲದ ಸಮಾಜದ ಜನತೆ, ಅಸ್ಪ್ರಶ್ಯತೆ,ಗುಲಾಮಗಿರಿ,ಶೋಶಣೆಗಳಿಗೆ ಕಾರಣರಾಗಿದ್ದ ಅಂದಿನ ಮೇಲ್ವರ್ಗದ ಜನರ ವಿರುಧ ನೂಹ್(ಅ) ಅವರು ಪ್ರತಿರೋಧಕ್ಕೆ ಸಿಧ್ದರಾಗಿ ಹುತಾತ್ಮರಾಗುವ ಮಾರ್ಗವನ್ನು ಅವಲಂಬಿಸಿಲ್ಲ. 950 ವರ್ಷಗಳ ಕಾಲ ತನ್ನ ಜನತೆಯನ್ನು ಸರಿದಾರಿಗೆ ತರಲು ಪ್ರಯತ್ನಿಸಿ ವಿಫಲರಾದರೇ ವಿನಹ ಆಕ್ರಮಿ ಸರದಾರ ವರ್ಗದ ನಿರ್ಮೂಲನಕ್ಕಾಗಿ ಪ್ರತಿರೋಧದ ದಾರಿ ಸ್ವೀಕರಿಸಲಿಲ್ಲ.

ಪ್ರವಾದಿ ಇಬ್ರಾಹೀಮ್(ಅ) ಅವರ ತಂದೆಯೇ ವಿಗ್ರಹ ತಯಾರಿಸುವ ಪುರೋಹಿತರಾಗಿದ್ದರು.ಅವರು ತನ್ನ ತಂದೆಯ ಕೃತ್ಯವನ್ನು ವಿರೋಧಿಸಿ ತಿರಸ್ಕ್ರತಗೊಂಡಾಗಲೂ, ಮನೆಯಿಂದ ಹೊರಗೆ ಅಟ್ಟಿದಾಗಲೂ, ಕೊಲೆಗೈಯ್ಯುವುದಾಗಿ ಹೇಳಿದಾಗಲೂ ತಂದೆಯ ಮುಖ ನೋಡಿ ಮುಶ್ರಿಕ್ ಎಂದು ಅಕ್ಷೇಪಿಸಲಿಲ್ಲ,ರಾಜನ ಆಸ್ತಾನದಲ್ಲಿ ತಂದೆ ಹೊಂದಿದ್ದ ಅಧಿಕಾರವನ್ನು ನಾಶ ಪಡಿಸುವುದಕ್ಕೆ ಉಪಾಯವನ್ನು ಹೂಡಿ ಪ್ರತೀಕಾರ ಕೈಗೊಳ್ಳಲಿಲ್ಲ. ರಾಜನು ಅಗ್ನಿ ಕುಂಡಕ್ಕೆ ಹಾಕಿದಾಗಲೂ ಪ್ರತೀಕಾರ ತೀರಿಸುವ ಸವಾಲು ಹಾಕಲಿಲ್ಲ.ದುಷ್ಟ ಜನರ ವಿನಾಶಕ್ಕೆ ಅನುಮತಿ ಕೋರಲು ದೇವಚರರನ್ನು ಅಲ್ಲಾಹನು ಕಳುಹಿಸಿಕೊಟ್ಟಾಗಲೂ ಅನುಮತಿ ನೀಡಲಿಲ್ಲ. ಆ ಊರಲ್ಲಿ ಬದುಕುವುದೇ ದುಸ್ತರವೆನಿಸಿಕೊಂಡಾಗ ಇನ್ನೊಂದು ಊರು ಅಲ್ಲಿಂದ ಮತ್ತೊಂದು ಊರಿಗೆ ಹೋಗಿ ಸಂದೇಶ ಪ್ರಚಾರ ನಡೆಸಿದರು.ಸಹೋದರ ಪುತ್ರ ಲೂತ್(ಅ)ಅವರ ಜನತೆ ಸಲಿಂಗ ಕಾಮದಲ್ಲಿ ಮುಳುಗಿದ್ದಾಗ ಅವರನ್ನು ನಾಶಗೈಯ್ಯಲು ಬಂದ ದೇವಚರರೊಡನೆ ಲೂತ್(ಅ) ವಾದಿಸಿದ್ದು "ಅವರು ನೀಚ ಕ್ರತ್ಯವೆಸಗಿದವರು ಆದರೂ ಕೂಡ ಅವರು ತಮ್ಮ ವರ್ತನೆಯನ್ನು ಬದಲಿಸಿಯಾರು" ಎಂಬ ಶುಭ ನಿರೀಕ್ಷೆಯಿರಿಸಿಕೊಂಡಿದ್ದರು.ಪ್ರತಿರೋಧಿಸುವ ಚಿಂತೆಯಲ್ಲಿ ಅಲೆದಾಡುವುದಕ್ಕಿಂತ ಸಂಸ್ಕರಣೆ,ಸುಧಾರಣೆಯ ವ್ಯಾಮೋಹವಿರಿಸಿ ಪ್ರಯತ್ನಿಸುವುದು ಶ್ರೇಷ್ಟವೆಂಬುದು ಇಬ್ರಾಹೀಮ್(ಅ) ಜೀವನ ಮಾದರಿಯಲ್ಲಿ ಅತ್ಯುತ್ತಮ ಪಾಠವಿದೆ.ಒಳಿತಿಗಿಂತ ಶ್ರೇಷ್ಟ ಬೇರೆ ಪ್ರತಿರೋಧವಿಲ್ಲ.ಪ್ರವಾದಿ ಇಬ್ರಾಹೀಮರ ಮರಿಮಗ ಪ್ರವಾದಿ ಯೂಸುಫ್‌ರನ್ನು(ಅ) ಎಳವೆಯಲ್ಲಿ ಅವರ ಸಹೋದರರೇ ಅವರನ್ನು ಪಾಳು ಬಾವಿಗೆಸಗಿದ್ದರು. ಅಲ್ಲಿಂದ ಪಾರಾಗಿ ಯವ್ವನಕ್ಕೆ ತಲುಪಿ ರಾಣಿಯ ಮೋಹಕ್ಕೆ ಬಲಿಯಾಗಿ ಅನೈತಿಕತೆಗೆ ಆಹ್ವಾನಿಸಿದಾಗ ಯೂಸುಫರು ತಿರಸ್ಕರಿಸುತ್ತಾರೆ. ರಾಣಿ ಅವರನ್ನು ಜೈಲಿಗೆ ಹಾಕುತ್ತಾಳೆ.ಹಾಗೆಂದು ಅವರು ಅನ್ಯಾಯವಾಗಿ ಬಂಧನಕ್ಕೊಳಗಾಗಿದ್ದೇನೆ ಎಂದು ರಾಣಿಯೊಂದಿಗೆ ಪ್ರತೀಕಾರಕ್ಕೆ ಹಾತೊರೆಯಲಿಲ್ಲ. ಜೈಲಿನಿಂದ ಬಿಡುಗಡೆ ಗೊಂಡ ಯೂಸುಫರು ರಾಜಾಧಿಕಾರದೊರೆತಾಗ ಅವರಲ್ಲಿಗೆ ಬಂದ ಬಾವಿಗೆಸೆದ ಸಹೋದರರನ್ನು ಕ್ಷಮಿಸಿದರೇ ಹೊರತು ಪ್ರತೀಕಾರವೆಸಗುವ ಆಲೋಚನೆಯನ್ನು ಮಾಡಲಿಲ್ಲ.ಒಳಿತನ್ನು ಪ್ರತಿರೋಧದ ಅಸ್ತ್ರವನ್ನಾಗಿ ಮಾಡಿಕೊಂಡವರ ಪರವಾಗಿ ಅಲ್ಲಾಹನೇ ಪ್ರತಿರೋಧಿಸುವನೆಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಫಿರ್‌ಔನ್‌ನಿಂದ ದೌರ್ಜನ್ಯಕ್ಕೀಡಾಗುತ್ತಿದ್ದ ಮಂದಿಯನ್ನು ಮೂಸಾ(ಆ)ರವರು ಅಲ್ಲಾಹನ ನೆರವು ಸಿಗುವ ತನಕ ಸಹನೆ ವಹಿಸುವಂತೆ ಸಾಂತ್ವನಿಸಿದರು.ಅವರನ್ನು ಬೆನ್ನಟ್ಟಲಾಯಿತು  ಕೊನೆಗೆ ಅಲ್ಲಾಹನು ಫಿರ್‌ಔನ್ ಹಾಗು ಅವನ ಆಡಳಿತಗಾರರನ್ನು ಸಮುದ್ರದಲ್ಲಿ ಮುಳುಗಿಸಿ ಬಿಟ್ಟನು.ಸತ್ಯವಿಶ್ವಾಸಿಗಳ ಪರವಾಗಿ ಅಲ್ಲಾಹನು ಪ್ರತಿರೋಧಿಸುತ್ತಾನೆಂಬ ಕುರ್‌ಆನೀ ಸೂಚನೆಗೆ ಮೂಸಾ(ಅ)ರ ಚರಿತ್ರೆಯು ಸಾಕ್ಷಿಯಾಗಿದೆ.

ಪ್ರವಾದಿ ಮುಹಮ್ಮದರು ಇದೇ ಧರ್ಮದ ಕೊಂಡಿಯಾಗಿದ್ದರು.ಅವರು ಕೂಡ ಮಕ್ಕಾದ ಕಾಲ ಘಟ್ಟದಲ್ಲಿ ಪ್ರತಿರೋಧಿಸದೆ ಸಹನೆಯಿಂದ, ಶಾಂತಿಯಿಂದ ಸಂದೇಶವನ್ನು ತಲುಪಿಸಿದರು.ಆದುದರಿಂದ ಇಸ್ಲಾಮ್ ಪ್ರತಿರೋಧಕ್ಕಿಂತ ಒಳಿತನ್ನು ಪ್ರತಿರೋಧದ ಅಸ್ತ್ರವಾಗಿ ಮುಂದಿಟ್ಟಿತು.

ಲೋಕಾರಂಭದಂದಿನಿಂದ ಸಮಾಜ ಸುಧಾರಣೆಗಾಗಿ ಪ್ರವಾದಿಗಳು ನೇಮಕವಾಗಿದ್ದರು. ಪ್ರವಾದಿ ಮುಹಮ್ಮದ್(ಸ)ರ ತರುವಾಯ ಇನ್ನೊಂದು ಪ್ರವಾದಿಯ ನೇಮಕವಿಲ್ಲ. ಆದರೆ ಅದೇ ಆದರ್ಶವನ್ನು ಸಂಸ್ಥಾಪಿಸುವುದಕ್ಕೆ(ಉಲೆಮಾಗಳು,ಉಮರಾಗಳು) ಪ್ರಯತ್ನಿಸಬೇಕಾದ ಕರ್ತವ್ಯವನ್ನು ವಿದ್ವಾಂಸರು ಹೊಂದಿದ್ದಾರೆ.ಸಂದೇಶ ಪ್ರಚಾರವು ಇದರಲ್ಲಿ  ಬಹುಮುಖ್ಯ ಕರ್ತವ್ಯವಾಗಿದೆ.ಅದಕ್ಕಾಗಿ ಕೆಲವು ಆಂದೋಲನಗಳು ಆರಂಭವಾದವು,ಅದರಲ್ಲಿ ಶಹೀದ್ ಹಸನುಲ್ ಬನ್ನ ಈಜಿಪ್ಟಿನಲ್ಲಿ ಸ್ಥಾಪಿಸಿದ ಇಖ್ವಾನುಲ್ ಮುಸ್ಲಿಮೂನ್(ಮುಸ್ಲಿಮ್ ಬ್ರದರ್ ಹುಡ್) ಮತ್ತು ಭಾರತದಲ್ಲಿ ಅಸ್ತಿತ್ವ ಕಂಡ ಜಮಾಅತೆ ಇಸ್ಲಾಮೀ ಹಿಂದ್ ಪ್ರಮುಖವಾದ ಆಂದೋಲನಗಳಾಗಿದೆ. ಪ್ರತಿರೋಧವನ್ನು ಕೈ ಬಿಟ್ಟು ಶಾಂತಿಯುತ ಚಟುವಟಿಕೆಗಳನ್ನು ಇವೆರಡೂ ನೆಚ್ಚಿಕೊಂಡಿವೆ. ಇಖ್ವಾನುಲ್ ಮುಸ್ಲಿಮೂನ್ ಇಸ್ಲಾಮಿನ ಕಾನೂನನ್ನು ಜಾರಿಗೊಳಿಸಲು ಶೈಕ್ಷಣಿಕ ಸುಧಾರಣೆಯ ಕ್ರಮ ಕೈಗೊಂಡಿತು.ಉತ್ತಮ ಆಡಳಿತ ಆ ಮೂಲಕ ಸಾಧಿಸುತ್ತದೆ ಎಂಬ ವಿಶ್ವಾಸ ತಾಳಿತು.ಉಪದೇ,ಬೋಧನೆ,ಶಿಕ್ಷಣ,ನಿರ್ಮಾಣ,ಸೇವಾ ಚಟುವಟಿಕೆಗಳು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡಿತು.ತನ್ನ ಗುರಿ ತಲುಪಲು ಅದೆಂದೂ ಬಲ ಪ್ರಯೋಗವನ್ನು ಇಚ್ಛಿಸಲಿಲ್ಲ. ಶಾಂತಿಯುತ ಪ್ರತಿಭಟನಾ ಚಟುವಟಿಕೆಗಳೇ ಪರಿಹಾರವೆಂದು ಅದು ನಂಬಿದೆ.

1941 ರಲ್ಲಿ ಅವಿಭಕ್ತ ಭಾರತದಲ್ಲಿ ಅಸ್ತಿಯ್ವಕ್ಕೆ ಬಂದ ಜಮಾಅತೆ ಇಸ್ಲಾಮೀ ಹಿಂದ್ 20ನೆಯ ಶತಮಾನದ ಇನ್ನೊಂದು ಇಸ್ಲಾಮೀ ಆಂದೋಲನವಾಗಿದೆ.ಅಂದು ಭಾರತದಲ್ಲಿ (ಬ್ರಿಟೀಷ್ ಇಂಡಿಯಾ) ಮೂರು ಕಂಪೆನಿಗಳಿದ್ದವು. ಒಂದು ನ್ಯಾಶನಲ್ ಕಾಂಗ್ರೆಸ್ ಎಂಬ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನ. ಎರಡನೆಯದು ಆಲ್ ಇಂಡಿಯಾ ಮುಸ್ಲಿಮ್ ಲೀಗ್ ಮೂರನೆಯದ್ದು ರಾಷ್ಟ್ರೀಯ ಸ್ವಯಂ ಸೇವಕ್ ಸಂಘ. ದೈವಿಕ ಸಂಕಲ್ಪದ ಆಧಾರದಲ್ಲಿರುವ ಜನಪ್ರಾತಿನಿಧ್ಯ ವ್ಯವಸ್ಥೆಯನ್ನು ದೇಶದಲ್ಲಿ ಪ್ರತಿಪಾದಿಸಿತು.ಆ ಗುರಿ ತಲುಪುವುದಕ್ಕೆ ಪ್ರವಾದಿಗಳು ತೋರಿಸಿರುವ ಶಾಂತಿಯುತ ಮಾರ್ಗವನ್ನು ಅನುಸರಿಸಿತು.ದೇಶ ವಿಭಜನೆಯನ್ನು ಪ್ರೋತ್ಸಾಹಿಸಲಿಲ್ಲ.1953ರಲ್ಲಿ ಮೌಲಾನ ಮೌದೂದಿಯವರಿಗೆ ಪಾಕ್ ಸರಕಾರ ಗಲ್ಲು ಶಿಕ್ಷೆ ಘೋಷಿಸಿದಾಗಲೂ ಅವರ ಅನುಯಾಯಿಗಳು ಉಧ್ವಿಘ್ನಗೊಂಡು ಹಿಂಸೆಗಿಳಿಯಲಿಲ್ಲ.ಪಾಕ್ ಸರಕಾರ ಜಮಾಅತೆ ಇಸ್ಲಾಮಿಯನ್ನು ನಿಷೇಧಿಸಿದಾಗಲೂ ಉಗ್ರವಾದ ದಾರಿಯ ಬದಲು ನ್ಯಾಯಾಂಗದ ದಾರಿಯಲ್ಲಿ ಮುಂದುವರಿಯಿತು.1975ರಲ್ಲಿ ಇಂದಿರಾಗಾಂಧಿ ಸರಕಾರ 1992ರಲ್ಲಿ ಪಿ.ವಿ.ನರಸಿಂಹರಾವ್ ಸರಕಾರ ನಿಷೇಧಿಸಿದಾಗಲೂ ಪ್ರಜಾಪ್ರಭುತ್ವ ಪರ ಕಾನೂನು ನ್ಯಾಯಾಂಗದ ದಾರಿಯಲ್ಲಿ ಪ್ರತಿಕ್ರಿಯಿಸಿತು.ದೇಶದ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಕೋಮು ತೀವ್ರವಾದಿಗಳ ಬೆದರಿಕೆಯನ್ನು ಎದುರಿಸಲು ಈ ಇಸ್ಲಾಮೀ ಆಂದೋಲನ ಪ್ರಜಾ ಪ್ರಭುತ್ವವಾದಿ ಪಕ್ಷಗಳ ಸಹಕಾರದಿಂದ ಮತ್ತು  ಪ್ರಜಾ ಪ್ರಭುತ್ವವಾದಿ ಮಾನವ ಹಕ್ಕುಗಳ ಸಂಘಟನೆಯ ಅಂಗವಾಗಿ ಜನಪರವಾಗಿ ಪ್ರತಿಭಟಿಸುವುದನ್ನು ಆಯ್ದುಕೊಂಡಿದೆ.ಇಸ್ಲಾಮಿನ ಮಿತ್ರತ್ವದ ಸಂದೇಶವನ್ನು ದೇಶಬಾಂಧವರಿಗೆ ತಲುಪಿಸಲು ಅದು ಕಟಿ ಬದ್ಧವಾಗಿದೆ ಹಾಗೂ ನಿರಂತರ ಪ್ರಯತ್ನಿಸುತ್ತಿದೆ ಆಕ್ರಮಣಕ್ಕೊಳಗಾದವರ ಧರ್ಮನ್ನು ಪರಿಗಣಿಸದೆ ಎಲ್ಲರಿಗೂ ನೆರವು ನೀಡಲು, ಅನುಕೂಲತೆ ಒದಗಿಸಲು ಕಾರ್ಯಪ್ರವೃತ್ತವಾಗುತ್ತದೆ.ಸಶಸ್ತ್ರ ಪ್ರತಿರೋಧಕ್ಕಿಂತ ಹೀಗೆ ಜನ ಮನಸ್ಸನ್ನು ಕಟ್ಟುವುದು ನೈಜ ಪ್ರತಿರೋಧವಾಗಿದೆ. ಜನರು ಒಳಿತು ಮತ್ತು ಕೆಡುಕನ್ನು ಬೇರ್ಪಡಿಸಲು ಸಮರ್ಥರಾಗುವುದೇ ಆಕ್ರಮಣಕಾರಿ ಶಕ್ತಿಗಳ ಸೊಲ್ಲು ಅಡಗಿಸುವುದಕ್ಕೆ ಪರ್ಯಾಪ್ತವಾಗಿದೆ.ಭಾರತದಲ್ಲಿ ಮುಸ್ಲಿಮರಿಗೆ ಶಾಂತಿಯ ಮಾರ್ಗ ಅನುಸರಿಸುವುದರ ಹೊರತು ಬೇರೆ ಯಾವ ವಿದಾನವೂ ಸೂಕ್ತವಲ್ಲ.ಅದನ್ನೇ ಪ್ರವಾದಿಗಳ ಚರಿತ್ರೆ ಮತ್ತು ಅಂತಿಮ ಪ್ರವಾದಿವರ್ಯರ(ಸ) ಮಕ್ಕಾ ಜೀವನದ ಕಾಲಘಟ್ಟ ಸಂಕೇತಿಸುತ್ತಿದೆ.